



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಪೈಗಂಬರರೇ, ಅಲ್ಲಾಹನನ್ನು ಭಯಪಡಿರಿ ಮತ್ತು ಸತ್ಯನಿಷೇಧಿಗಳ ಹಾಗೂ ಕಪಟವಿಶ್ವಾಸಿಗಳ ಅನುಸರಣೆ ಮಾಡಬೇಡಿರಿ. ವಾಸ್ತವದಲ್ಲಿ ಸರ್ವಜ್ಞನೂ ಯುಕ್ತಿಪೂರ್ಣನೂ ಅಲ್ಲಾಹನೇ ಆಗಿರುತ್ತಾನೆ.

يٰٓاَيُّهَا النَّبِيُّ اتَّقِ اللّٰهَ وَلَا تُطِعِ الْكٰفِرِيْنَ
وَالْمُنٰفِقِيْنَ ؕ اِنَّ اللّٰهَ كَانَ عَلِيْمًا حَكِيْمًا ﴿١﴾

2. ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ನೀಡಲಾಗುತ್ತಿರುವ ಬೋಧನೆಯನ್ನು ಅನುಸರಿಸಿರಿ. ಅಲ್ಲಾಹನು, ನೀವು ಮಾಡುತ್ತಿರುವ ಪ್ರತಿಯೊಂದು ಕಾರ್ಯದ ಅರಿವುಳ್ಳವನಾಗಿದ್ದಾನೆ-

وَّاتَّبِعْ مَا يُوْحٰٓى اِلَيْكَ مِنْ رَّبِّكَ ؕ
اِنَّ اللّٰهَ كَانَ بِمَا تَعْمَلُوْنَ خَبِيْرًا ﴿٢﴾

3. ಮತ್ತು ಅಲ್ಲಾಹನ ಮೇಲೆಯೇ ಭರವಸೆಯನ್ನಿಡಿರಿ. ಕಾರ್ಯ ನಿರ್ವಾಹಕನಾಗಲು ಅಲ್ಲಾಹನೇ ಸಾಕು.

وَّتَوَكَّلْ عَلَى اللّٰهِ ؕ وَكَفٰى بِاللّٰهِ وَكِيْلًا ﴿٣﴾

4. ಅಲ್ಲಾಹನು ಯಾವ ಮನುಷ್ಯನ ಶರೀರದೊಳಗೂ ಎರಡು ಹೃದಯಗಳನ್ನಿರಿಸಿಲ್ಲ. ನೀವು 'ಝಿಹಾರ್'[1] ಮಾಡುವ ನಿಮ್ಮ ಪತ್ನಿಯರನ್ನು ಅವನು ನಿಮ್ಮ ತಾಯಂದಿರನ್ನಾಗಿ ಮಾಡಲೂ ಇಲ್ಲ ಮತ್ತು ಅವನು ನಿಮ್ಮ ದತ್ತುಪುತ್ರರನ್ನು ನಿಮ್ಮ ಸ್ವಂತ ಪುತ್ರರನ್ನಾಗಿ ಮಾಡಿರುವುದೂ ಇಲ್ಲ. ಇವೆಲ್ಲ ನೀವು ನಿಮ್ಮ ಬಾಯಿಯಿಂದ ಹೊರಡಿಸಿ ಬಿಡುವ ಮಾತುಗಳು. ಆದರೆ ಅಲ್ಲಾಹನು ಕೇವಲ ಸತ್ಯವಾದುದನ್ನೇ ಹೇಳುತ್ತಾನೆ. ಅವನೇ ಸನ್ಮಾರ್ಗದ ಕಡೆಗೆ ಮಾರ್ಗದರ್ಶನ ನೀಡುತ್ತಾನೆ.

مَا جَعَلَ اللّٰهُ لِرَجُلٍ مِّنْ قَلْبَيْنِ فِيْ
جَوْفِهٖ ۚ وَمَا جَعَلَ اَزْوَاجَكُمُ الّٰٓـِٔيْ
تُظٰهِرُوْنَ مِنْهُنَّ اُمَّهٰتِكُمْ ۚ وَمَا جَعَلَ
اَدْعِيَآءَكُمْ اَبْنَآءَكُمْ ؕ ذٰلِكُمْ قَوْلُكُمْ
بِاَفْوَاهِكُمْ ؕ وَاللّٰهُ يَقُوْلُ الْحَقَّ وَهُوَ
يَهْدِي السَّبِيْلَ ﴿٤﴾

5. ದತ್ತು ಮಕ್ಕಳನ್ನು ಅವರ ಪಿತರಿಗೆ ಸಂಬಂಧಿಸಿ ಕರೆಯಿರಿ. ಇದು ಅಲ್ಲಾಹನ ಬಳಿ ಹೆಚ್ಚು ನ್ಯಾಯೋಚಿತವಾದ ವಿಷಯವಾಗಿದೆ

اُدْعُوْهُمْ لِاٰبَآئِهِمْ هُوَ اَقْسَطُ عِنْدَ
اللّٰهِ ۚ فَاِنْ لَّمْ تَعْلَمُوْٓا اٰبَآءَهُمْ فَاِخْوَانُكُمْ

1. 'ಝಿಹಾರ್' ಎಂದರೆ ಪತ್ನಿಯನ್ನು ತಾಯಿಯಂತೆ ಎಂದು ಸಾರುವುದು.

ಮತ್ತು ನಿಮಗೆ ಅವರ ಪಿತರು ಯಾರೆಂದು ತಿಳಿದಿರದಿದ್ದರೆ ಅವರು ನಿಮ್ಮ ಧರ್ಮ ಸಹೋದರರು ಮತ್ತು ಮಿತ್ರರಾಗಿರುತ್ತಾರೆ. ನೀವು ತಿಳಿಯದೆ ಹೇಳಿ ಬಿಟ್ಟ ಮಾತಿಗಾಗಿ ನಿಮ್ಮ ಮೇಲೇನೂ ದೋಷವಿಲ್ಲ. ಆದರೂ ನೀವು ಉದ್ದೇಶಪೂರ್ವಕವಾಗಿ ಹೇಳಿದ ಮಾತಿನ ಬಗ್ಗೆ ಖಂಡಿತ ದೋಷವಿದೆ. ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

فِي الدِّينِ وَمَوَالِيكُمْ ۚ وَلَيْسَ عَلَيْكُمْ جُنَاحٌ فِيمَا أَخْطَأْتُم بِهِ وَلَٰكِن مَّا تَعَمَّدَتْ قُلُوبُكُمْ ۚ وَكَانَ اللَّهُ غَفُورًا رَّحِيمًا ٥

6. ನಿಶ್ಚಯವಾಗಿಯೂ ಪ್ರವಾದಿಯು ಸತ್ಯವಿಶ್ವಾಸಿಗಳಿಗೆ ಅವರ ಸ್ವಂತ ಅಸ್ತಿತ್ವಕ್ಕಿಂತಲೂ ಪ್ರಧಾನರಾಗಿದ್ದಾರೆ ಮತ್ತು ಪ್ರವಾದಿಯ ಪತ್ನಿಯರು ಅವರ ಮಾತೆಯರಾಗಿದ್ದಾರೆ. ಆದರೆ ದೇವ ಗ್ರಂಥದ ದೃಷ್ಟಿಯಿಂದ ಸಾಮಾನ್ಯ ಸತ್ಯವಿಶ್ವಾಸಿಗಳು ಹಾಗೂ ಮುಹಾಜಿರರಿಗಿಂತಲೂ ಸಂಬಂಧಿಕರು ಪರಸ್ಪರರ ಪಾಲಿಗೆ ಅಧಿಕ ಹಕ್ಕುದಾರರಾಗಿದ್ದಾರೆ. ಆದರೆ, ತಮ್ಮ ಮಿತ್ರರೊಂದಿಗೆ ನೀವೇನಾದರೂ ಒಳಿತು (ಮಾಡಲಿಚ್ಛಿಸುತ್ತೀರಾದರೆ) ಮಾಡಬಹುದು. ಈ ಆಜ್ಞೆಯು ದೇವ ಗ್ರಂಥದಲ್ಲಿ ಬರೆದಿದೆ.

النَّبِيُّ أَوْلَىٰ بِالْمُؤْمِنِينَ مِنْ أَنفُسِهِمْ ۖ وَأَزْوَاجُهُ أُمَّهَاتُهُمْ ۗ وَأُولُو الْأَرْحَامِ بَعْضُهُمْ أَوْلَىٰ بِبَعْضٍ فِي كِتَابِ اللَّهِ مِنَ الْمُؤْمِنِينَ وَالْمُهَاجِرِينَ إِلَّا أَن تَفْعَلُوا إِلَىٰ أَوْلِيَائِكُم مَّعْرُوفًا ۚ كَانَ ذَٰلِكَ فِي الْكِتَابِ مَسْطُورًا ٦

7. ಮತ್ತು (ಪೈಗಂಬರರೇ) ನಾವು ಎಲ್ಲ ಪ್ರವಾದಿಗಳಿಂದ ಪಡೆದಿರುವ ಕರಾರನ್ನು ನೆನಪಿಡಿರಿ. ನಿಮ್ಮಿಂದಲೂ ನೂಹ್, ಇಬ್‌ರಾಹೀಮ್, ಮೂಸಾ ಮತ್ತು ಮರ್ಯಮರ ಪುತ್ರ ಈಸಾರಿಂದಲೂ ಎಲ್ಲರಿಂದಲೂ ನಾವು ಬಲವಾದ ಕರಾರನ್ನು ಪಡೆದಿರುತ್ತೇವೆ.[2]

وَإِذْ أَخَذْنَا مِنَ النَّبِيِّينَ مِيثَاقَهُمْ وَمِنكَ وَمِن نُّوحٍ وَإِبْرَاهِيمَ وَمُوسَىٰ وَعِيسَى ابْنِ مَرْيَمَ ۖ وَأَخَذْنَا مِنْهُم مِّيثَاقًا غَلِيظًا ٧

8. (ಇದು, ಅವರ ಪ್ರಭು) ಸತ್ಯಸಂಧರಿಂದ ಅವರ ಸತ್ಯಸಂಧತೆಯ ಕುರಿತು ಪ್ರಶ್ನಿಸಲಿಕ್ಕಾಗಿ (ಆಗಿರುತ್ತದೆ) ಮತ್ತು ಸತ್ಯನಿಷೇಧಿಗಳಿಗಾಗಿ ಅವನು ವೇದನಾಯುಕ್ತ ಯಾತನೆಯನ್ನು ಸಿದ್ಧಪಡಿಸಿಯೇ ಇಟ್ಟಿದ್ದಾನೆ.

لِّيَسْأَلَ الصَّادِقِينَ عَن صِدْقِهِمْ ۚ وَأَعَدَّ لِلْكَافِرِينَ عَذَابًا أَلِيمًا ٨ ع

9. ಸತ್ಯವಿಶ್ವಾಸಿಗಳೇ,[3] ಅಲ್ಲಾಹನು(ಇದೀಗ) ನಿಮಗೆ ಮಾಡಿರುವ

يَا أَيُّهَا الَّذِينَ آمَنُوا اذْكُرُوا نِعْمَةَ اللَّهِ

2. ಎಲ್ಲಾ ಪ್ರವಾದಿಗಳಂತೆ ತಮ್ಮಿಂದಲೂ ಅಲ್ಲಾಹನು ದೃಢವಾದ ಪ್ರತಿಜ್ಞೆಯನ್ನು ಪಡೆದಿದ್ದಾನೆ. ಅದನ್ನು ತಾವು ಕಟ್ಟುನಿಟ್ಟಿನಿಂದ ಪಾಲಿಸಬೇಕಾಗಿದೆ ಎಂದು ಈ ಸೂಕ್ತದ ಮೂಲಕ ಅಲ್ಲಾಹನು ಪ್ರವಾದಿವರ್ಯರಿಗೆ(ಸ) ನೆನಪಿಸುತ್ತಿದ್ದಾನೆ. ಪ್ರವಾದಿಗಳು ಅಲ್ಲಾಹನ ಆದೇಶಗಳನ್ನು ಸ್ವತಃ ಪಾಲಿಸುವರು ಹಾಗೂ ಇತರರನ್ನೂ ಪಾಲಿಸುವಂತೆ ಮಾಡುವರು. ಅಲ್ಲಾಹನ ಮಾತುಗಳನ್ನು ಚಾಚೂ ತಪ್ಪದಂತೆ ಜನರಿಗೆ ತಲಪಿಸುವರು. ಅದನ್ನು ಕಾರ್ಯತಃ ಜಾರಿಗೊಳಿಸುವ ಪ್ರಯತ್ನಗಳಲ್ಲಿ ಯಾವ ಚ್ಯುತಿಯನ್ನೂ ಮಾಡಲಾರರು ಎಂಬುದೇ ಈ ಪ್ರತಿಜ್ಞೆಯ ಅರ್ಥವಾಗಿದೆ. ಹಿಂದಿನಿಂದಲೂ ಅನುಸರಿಸಲಾಗಿರುವ ವಾಕ್ಸರಣಿಯನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಪವಿತ್ರ ಕುರ್‌ಆನಿನ ವಿವಿಧೆಡೆಗಳಲ್ಲಿ ಈ ಪ್ರತಿಜ್ಞೆಯ ಪ್ರಸ್ತಾಪವಿದೆ. ಉದಾ: ಸೂರಃ ಅಲ್ ಬಕರಃ - 83, ಆಲಿ ಇಮ್ರಾನ್ - 187, ಅಲ್ ಮಾಇದಃ - 7, ಅಲ್ ಅಅ್‌ರಾಫ್ - 169,171, ಅಶ್ಶೂರಾ - 13.

3. ಇಲ್ಲಿಂದ 27ನೆಯ ಸೂಕ್ತದ ಕಡೆಗೆ ಅಹ್‌ಝಾಬ್ ಮತ್ತು ಬನೀಕುರೈಝಾ ಮಹಾಯುದ್ಧಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

ಉಪಕಾರವನ್ನು ಸ್ಮರಿಸಿರಿ. ನಿಮ್ಮ ಮೇಲೆ ಸೈನ್ಯಗಳು ಏರಿ ಬಂದಾಗ ನಾವು ಅವರ ಮೇಲೆ ಒಂದು ಬಲವಾದ ಬಿರುಗಾಳಿಯನ್ನು ಕಳುಹಿಸಿದೆವು ಮತ್ತು ನಿಮಗೆ ಕಾಣಿಸದಂತಹ ಸೈನ್ಯಗಳನ್ನು ರವಾನಿಸಿದೆವು.[4] ನೀವು ಆಗ ಮಾಡುತ್ತಿದ್ದುದನ್ನೆಲ್ಲ ಅಲ್ಲಾಹನು ನೋಡುತ್ತಿದ್ದನು.

عَلَيْكُمْ إِذْ جَاءَتْكُمْ جُنُودٌ فَأَرْسَلْنَا
عَلَيْهِمْ رِيحًا وَجُنُودًا لَمْ تَرَوْهَا ۚ وَ
كَانَ اللَّهُ بِمَا تَعْمَلُونَ بَصِيرًا ﴿٩﴾

10. ಶತ್ರುಗಳು ಮೇಲಿಂದಲೂ ಕೆಳಗಿಂದಲೂ ನಿಮ್ಮ ಮೇಲೆ ಏರಿ ಬಂದಾಗ, ಭಯದಿಂದ ಕಣ್ಣುಗಳು ನಿಶ್ಚಲಗೊಂಡಾಗ, ಹೃದಯಗಳು ಬಾಯಿಗೆ ಬಂದಾಗ ಮತ್ತು ನೀವು ಅಲ್ಲಾಹನ ವಿಷಯದಲ್ಲಿ ತರತರದ ಗುಮಾನಿಗಳನ್ನಿರಿಸಲು ತೊಡಗಿದಾಗ,

إِذْ جَاءُوكُمْ مِنْ فَوْقِكُمْ وَمِنْ أَسْفَلَ
مِنْكُمْ وَإِذْ زَاغَتِ الْأَبْصَارُ وَبَلَغَتِ
الْقُلُوبُ الْحَنَاجِرَ وَتَظُنُّونَ بِاللَّهِ الظُّنُونَا ﴿١٠﴾

11. ಸತ್ಯವಿಶ್ವಾಸಿಗಳು ಚೆನ್ನಾಗಿ ಪರೀಕ್ಷಿಸಲ್ಪಟ್ಟರು ಮತ್ತು ತೀವ್ರವಾಗಿ ನಡುಗಿಸಲ್ಪಟ್ಟರು.

هُنَالِكَ ابْتُلِيَ الْمُؤْمِنُونَ وَزُلْزِلُوا
زِلْزَالًا شَدِيدًا ﴿١١﴾

12. ಕಪಟವಿಶ್ವಾಸಿಗಳೂ ಹೃದಯಗಳಲ್ಲಿ ರೋಗವಿದ್ದವರೂ- ಅಲ್ಲಾಹ್ ಮತ್ತು ಅವನ ಪ್ರವಾದಿ ನಮ್ಮೊಡನೆ ಮಾಡಿದ್ದ ವಾಗ್ದಾನಗಳೆಲ್ಲಾ ವಂಚನೆಯೇ ವಿನಾ ಇನ್ನೇನೂ ಅಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.

وَإِذْ يَقُولُ الْمُنَافِقُونَ وَالَّذِينَ فِي
قُلُوبِهِمْ مَرَضٌ مَا وَعَدَنَا اللَّهُ وَ
رَسُولُهُ إِلَّا غُرُورًا ﴿١٢﴾

13. ಅವರಲ್ಲೊಂದು ತಂಡವು, "ಯಸ್ರಿಬ್‌ನವರೇ, ನಿಮಗಿನ್ನು ನಿಲ್ಲುವ ಅವಕಾಶವೇನೂ ಇಲ್ಲ, ಮರಳಿ ಹೋಗಿರಿ" ಎಂದು ಹೇಳಿದಾಗ ಮತ್ತು ಅವರ ಒಂದು ಕೂಟವು, "ನಮ್ಮ ಮನೆಗಳು ಅಪಾಯಕ್ಕೊಳಗಾಗಿವೆ" ಎನ್ನುತ್ತ ತಮ್ಮ ಪ್ರವಾದಿಯಿಂದ ಅನುಮತಿ ಕೇಳತೊಡಗಿದಾಗ, ಅವು ನಿಜವಾಗಿ ಅಪಾಯದಲ್ಲಿರಲಿಲ್ಲ. ವಾಸ್ತವದಲ್ಲಿ ಅವರು (ರಣರಂಗದಿಂದ) ಪರಾರಿಯಾಗಲು ಇಚ್ಛಿಸುತ್ತಿದ್ದರು.

وَإِذْ قَالَتْ طَائِفَةٌ مِنْهُمْ يَا أَهْلَ يَثْرِبَ
لَا مُقَامَ لَكُمْ فَارْجِعُوا ۚ وَيَسْتَأْذِنُ فَرِيقٌ
مِنْهُمُ النَّبِيَّ يَقُولُونَ إِنَّ بُيُوتَنَا عَوْرَةٌ ۛ
وَمَا هِيَ بِعَوْرَةٍ ۛ إِنْ يُرِيدُونَ إِلَّا فِرَارًا ﴿١٣﴾

14. ಪಟ್ಟಣದ ಸುತ್ತಮುತ್ತಲಿಂದ ಶತ್ರುಗಳು ನುಗ್ಗಿ ಬರುತ್ತಿದ್ದರೆ ಮತ್ತು ಆ ವೇಳೆ ಇವರಿಗೆ ಪಿತೂರಿಯ ಕರೆ ನೀಡಲಾಗುತ್ತಿದ್ದರೆ ಇವರು ಅದರಲ್ಲಿ ಬೀಳುತ್ತಿದ್ದರು ಮತ್ತು ಪಿತೂರಿಯಲ್ಲಿ ಪಾಲ್ಗೊಳ್ಳಲು ಇವರಿಗೆ ಸ್ವಲ್ಪವೂ ಅಳುಕುಂಟಾಗುತ್ತಿರಲಿಲ್ಲ.

وَلَوْ دُخِلَتْ عَلَيْهِمْ مِنْ أَقْطَارِهَا ثُمَّ
سُئِلُوا الْفِتْنَةَ لَآتَوْهَا وَمَا تَلَبَّثُوا بِهَا
إِلَّا يَسِيرًا ﴿١٤﴾

15. ತಾವು ಬೆನ್ನು ತೋರಿಸಲಿಕ್ಕಿಲ್ಲವೆಂದು ಇದಕ್ಕೆ ಮುಂಚೆ ಇವರು

وَلَقَدْ كَانُوا عَاهَدُوا اللَّهَ مِنْ قَبْلُ

4. ಅರ್ಥಾತ್- ದೇವಚರರ ಸೈನ್ಯಗಳು.

ಅಲ್ಲಾಹನೊಡನೆ ಕರಾರು ಮಾಡಿದ್ದರು ಮತ್ತು ಅಲ್ಲಾಹನೊಂದಿಗೆ ಮಾಡಿದ ಕರಾರಿನ ವಿಚಾರಣೆ ನಡೆದೇ ತೀರಲಿಕ್ಕಿತ್ತು.

لَا يُوَلُّونَ الْأَدْبَارَ ۚ وَكَانَ عَهْدُ
اللَّهِ مَسْئُولًا ﴿١٥﴾

16. ಪೈಗಂಬರರೇ, ಇವರೊಡನೆ ಹೇಳಿರಿ- "ನೀವು ಮರಣ ಅಥವಾ ಹತ್ಯೆಯನ್ನು ಹೆದರಿ ಓಡುವುದಿದ್ದರೆ ನಿಮ್ಮ ಈ ಪಲಾಯನವು ನಿಮಗೇನೂ ಫಲಕಾರಿಯಾಗದು. ಆ ಬಳಿಕ ನಿಮಗೆ ಜೀವನದ ಸುಖವನ್ನು ಅನುಭವಿಸಲು ಅಲ್ಪಕಾಲ ಮಾತ್ರವೇ ಅವಕಾಶ ಸಿಗುವುದು."

قُلْ لَنْ يَنْفَعَكُمُ الْفِرَارُ إِنْ فَرَرْتُمْ
مِنَ الْمَوْتِ أَوِ الْقَتْلِ وَإِذًا لَا تُمَتَّعُونَ
إِلَّا قَلِيلًا ﴿١٦﴾

17. ಇವರೊಡನೆ ಹೇಳಿರಿ, "ಅಲ್ಲಾಹ್ ನಿಮಗೆ ಹಾನಿಯುಂಟು ಮಾಡಲಿಚ್ಛಿಸಿದರೆ ನಿಮ್ಮನ್ನು ಅವನಿಂದ ರಕ್ಷಿಸುವವನಾರು? ಅವನು ನಿಮ್ಮ ಮೇಲೆ ಕರುಣೆ ತೋರ ಬಯಸಿದರೆ, ಅವನ ಕೃಪೆಯನ್ನು ತಡೆಯುವವನಾರು? ಅಲ್ಲಾಹನಿಗೆದುರು ಇವರು ಯಾವ ರಕ್ಷಕ ಮಿತ್ರನನ್ನೂ ಸಹಾಯಕನನ್ನೂ ಪಡೆಯಲಾರರು."

قُلْ مَنْ ذَا الَّذِي يَعْصِمُكُمْ مِنَ اللَّهِ
إِنْ أَرَادَ بِكُمْ سُوءًا أَوْ أَرَادَ بِكُمْ
رَحْمَةً ۚ وَلَا يَجِدُونَ لَهُمْ مِنْ دُونِ
اللَّهِ وَلِيًّا وَلَا نَصِيرًا ﴿١٧﴾

18. ನಿಮ್ಮಲ್ಲಿ (ಯುದ್ಧ ಕಾರ್ಯದಲ್ಲಿ) ತಡೆಗಳನ್ನು ಉಂಟು ಮಾಡುವವರನ್ನು ಅಲ್ಲಾಹನು ಚೆನ್ನಾಗಿ ಬಲ್ಲನು. ಅವರು ತಮ್ಮ ಸಹೋದರರೊಡನೆ, "ನಮ್ಮ ಕಡೆಗೆ ಬನ್ನಿರಿ" ಎನ್ನುತ್ತಾರೆ. ಅವರು ಯುದ್ಧದಲ್ಲಿ ಭಾಗವಹಿಸುವುದಿದ್ದರೂ ಕೇವಲ ನಾಮ ಮಾತ್ರಕ್ಕೆ.

قَدْ يَعْلَمُ اللَّهُ الْمُعَوِّقِينَ مِنْكُمْ
وَالْقَائِلِينَ لِإِخْوَانِهِمْ هَلُمَّ إِلَيْنَا ۖ وَ
لَا يَأْتُونَ الْبَأْسَ إِلَّا قَلِيلًا ﴿١٨﴾

19. ಅವರು ನಿಮಗೆ ಸಹಕಾರ ಕೊಡುವುದರಲ್ಲಿ ಮಹಾ ಜಿಪುಣರು. ಅಪಾಯದ ಸಂದರ್ಭ ಬಂದಾಗ ಅವರು ಸಾಯುವವನಿಗೆ ಮೂರ್ಛೆ ಬರುವಂತೆ ಕಣ್ಣು ಗೊಂಬೆಗಳನ್ನು ತಿರುಗಿಸುತ್ತ ನಿಮ್ಮ ಕಡೆಗೆ ನೋಡುತ್ತಾರೆ. ಆದರೆ ಅಪಾಯ ನೀಗಿದ ಬಳಿಕ ಅದೇ ಜನರು ಲಾಭಗಳ ದುರಾಸೆಯಿಂದ ಹರಿತವಾದ ನಾಲಗೆಯೊಂದಿಗೆ ನಿಮ್ಮನ್ನು ಸ್ವಾಗತಿಸಲು ಬಂದು ಬಿಡುತ್ತಾರೆ. ಅವರು ಎಷ್ಟು ಮಾತ್ರಕ್ಕೂ ಸತ್ಯವಿಶ್ವಾಸವನ್ನು ಸ್ವೀಕರಿಸಲಿಲ್ಲ. ಆದುದರಿಂದಲೇ ಅಲ್ಲಾಹನು ಅವರ ಎಲ್ಲ ಕರ್ಮಗಳನ್ನೂ ನಿರರ್ಥಕಗೊಳಿಸಿ ಬಿಟ್ಟನು. ಹೀಗೆ ಮಾಡುವುದು ಅಲ್ಲಾಹನಿಗೆ ಬಹಳ ಸುಲಭ.

أَشِحَّةً عَلَيْكُمْ ۖ فَإِذَا جَاءَ الْخَوْفُ
رَأَيْتَهُمْ يَنْظُرُونَ إِلَيْكَ تَدُورُ أَعْيُنُهُمْ
كَالَّذِي يُغْشَىٰ عَلَيْهِ مِنَ الْمَوْتِ ۖ فَإِذَا
ذَهَبَ الْخَوْفُ سَلَقُوكُمْ بِأَلْسِنَةٍ حِدَادٍ
أَشِحَّةً عَلَى الْخَيْرِ ۚ أُولَٰئِكَ لَمْ يُؤْمِنُوا
فَأَحْبَطَ اللَّهُ أَعْمَالَهُمْ ۚ وَكَانَ ذَٰلِكَ
عَلَى اللَّهِ يَسِيرًا ﴿١٩﴾

20. ಆಕ್ರಮಣಕಾರರು ಇನ್ನೂ ಹೋಗಿಲ್ಲವೆಂದು ಇವರು ಭಾವಿಸುತ್ತಾರೆ ಮತ್ತು ಅವರು ಪುನಃ ಆಕ್ರಮಣ ನಡೆಸಿ ಬಿಟ್ಟರೆ, ಆ ಸಂದರ್ಭದಲ್ಲಿ ಮರುಭೂಮಿಯಲ್ಲಿ ಎಲ್ಲಾದರೂ ಹಳ್ಳಿಗರ ನಡುವೆ ಇದ್ದುಕೊಂಡು ಅಲ್ಲಿಂದಲೇ ನಿಮ್ಮ ಸ್ಥಿತಿಗತಿಗಳನ್ನು

يَحْسَبُونَ الْأَحْزَابَ لَمْ يَذْهَبُوا ۖ وَ
إِنْ يَأْتِ الْأَحْزَابُ يَوَدُّوا لَوْ أَنَّهُمْ
بَادُونَ فِي الْأَعْرَابِ يَسْأَلُونَ عَنْ أَنْبَائِكُمْ

ವಿಚಾರಿಸಿಕೊಂಡು ಇರಬಹುದೆಂದು ಅವರಿಗೆ ಅನಿಸುತ್ತದೆ. ಒಂದು ವೇಳೆ ಅವರು ನಿಮ್ಮ ನಡುವಿನಲ್ಲಿದ್ದರೂ ಯುದ್ಧದಲ್ಲಿ ಅತ್ಯಲ್ಪವೇ ಭಾಗವಹಿಸುವರು.

وَلَوْ كَانُوا فِيكُم مَّا قَاتَلُوا إِلَّا قَلِيلًا ٢٠

21. ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು.[5] (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ.

لَقَدْ كَانَ لَكُمْ فِي رَسُولِ اللَّهِ أُسْوَةٌ
حَسَنَةٌ لِّمَن كَانَ يَرْجُو اللَّهَ وَالْيَوْمَ
الْآخِرَ وَذَكَرَ اللَّهَ كَثِيرًا ٢١

22. ನಿಜವಾದ ಸತ್ಯವಿಶ್ವಾಸಿಗಳು ಆಕ್ರಮಣಕಾರಿ ಸೇನೆಗಳನ್ನು ಕಂಡಾಗ, "ಅಲ್ಲಾಹ್ ಮತ್ತು ಪೈಗಂಬರರು ನಮಗೆ ವಾಗ್ದಾನ ಮಾಡಿದ್ದುದು ಇದನ್ನೇ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮಾತು ನಿಜವಾಗಿತ್ತು" ಎಂದು ಉದ್ಗರಿಸಿದರು. ಈ ಘಟನೆಯು ಅವರ ವಿಶ್ವಾಸವನ್ನೂ ಅವರ ಸಮರ್ಪಣಾಭಾವವನ್ನೂ ಇನ್ನಷ್ಟು ವರ್ಧಿಸಿ ಬಿಟ್ಟಿತು.

وَلَمَّا رَأَى الْمُؤْمِنُونَ الْأَحْزَابَ قَالُوا
هَٰذَا مَا وَعَدَنَا اللَّهُ وَرَسُولُهُ وَصَدَقَ
اللَّهُ وَرَسُولُهُ ۚ وَمَا زَادَهُمْ إِلَّا
إِيمَانًا وَتَسْلِيمًا ٢٢

23. ಅಲ್ಲಾಹನೊಡನೆ ಮಾಡಿದ ಕರಾರನ್ನು ನಿಜವೆಂದು ಸಾಧಿಸಿ ತೋರಿಸಿದವರು ಸತ್ಯವಿಶ್ವಾಸ ಸ್ವೀಕಾರ ಮಾಡಿದವರಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಪೂರ್ಣ ಗೊಳಿಸಿದರು. ಇನ್ನು ಕೆಲವರು ಸಮಯ ಕಾಯುತ್ತಿದ್ದಾರೆ. ಅವರು ತಮ್ಮ ನಿಲುಮೆಯಲ್ಲಿ ಏನೂ ಬದಲಾವಣೆ ಮಾಡಲಿಲ್ಲ.

مِّنَ الْمُؤْمِنِينَ رِجَالٌ صَدَقُوا مَا
عَاهَدُوا اللَّهَ عَلَيْهِ ۖ فَمِنْهُم مَّن قَضَىٰ
نَحْبَهُ وَمِنْهُم مَّن يَنتَظِرُ ۖ وَمَا
بَدَّلُوا تَبْدِيلًا ٢٣

24. ಅಲ್ಲಾಹ್ ಸತ್ಯಸಂಧರಿಗೆ ಅವರ ಸತ್ಯಸಂಧತೆಯ ಸತ್ಫಲ ನೀಡು ವಂತಾಗಲಿಕ್ಕೂ ತಾನಿಚ್ಛಿಸಿದರೆ ಕಪಟವಿಶ್ವಾಸಿಗಳನ್ನು ಶಿಕ್ಷಿಸಲಿಕ್ಕೂ ಅಥವಾ ಅವರ ಪಶ್ಚಾತ್ತಾಪವನ್ನು ಸ್ವೀಕರಿಸಲಿಕ್ಕೂ (ಹೀಗೆಲ್ಲ ಆಯಿತು). ನಿಶ್ಚಯವಾಗಿಯೂ ಅಲ್ಲಾಹ್ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

لِّيَجْزِيَ اللَّهُ الصَّادِقِينَ بِصِدْقِهِمْ
وَيُعَذِّبَ الْمُنَافِقِينَ إِن شَاءَ أَوْ يَتُوبَ
عَلَيْهِمْ ۚ إِنَّ اللَّهَ كَانَ غَفُورًا رَّحِيمًا ٢٤

25. ಅಲ್ಲಾಹನು ಸತ್ಯನಿಷೇಧಕರ ಮುಖ ತಿರುಗಿಸಿ ಬಿಟ್ಟನು. ಅವರು ಏನೂ ಪ್ರಯೋಜನ ಪಡೆಯದೆ ತಮ್ಮ ಹೃದಯ ಬೇಗುದಿ ಯೊಂದಿಗೆ ಹಾಗೆಯೇ ಮರಳಿ ಹೋದರು. ಸತ್ಯವಿಶ್ವಾಸಿಗಳ ಕಡೆ ಯಿಂದ ಯುದ್ಧ ಮಾಡಲು ಅಲ್ಲಾಹನೇ ಸಾಕಾದನು. ಅಲ್ಲಾಹ್ ಪ್ರಬಲನೂ ಅಜೇಯನೂ ಆಗಿರುತ್ತಾನೆ.

وَرَدَّ اللَّهُ الَّذِينَ كَفَرُوا بِغَيْظِهِمْ لَمْ
يَنَالُوا خَيْرًا ۚ وَكَفَى اللَّهُ الْمُؤْمِنِينَ
الْقِتَالَ ۚ وَكَانَ اللَّهُ قَوِيًّا عَزِيزًا ٢٥

5. ಅತ್ಯುತ್ತಮ ಮಾದರಿ ಇದೆ ಎಂದೂ ಇದನ್ನು ಭಾಷಾಂತರಿಸಬಹುದು.

26. ಗ್ರಂಥದವರಲ್ಲಿ ಈ ಆಕ್ರಮಣಕಾರರಿಗೆ ನೆರವಾದವರನ್ನು[6] ಅಲ್ಲಾಹ್ ಅವರ ಕೋಟೆಗಳಿಂದ ಇಳಿಸಿ ತಂದನು ಮತ್ತು ಅವರ ಹೃದಯಗಳಲ್ಲಿ ಎಂತಹ ಭೀತಿಯನ್ನಿರಿಸಿ ಬಿಟ್ಟನೆಂದರೆ, ಅವರ ಒಂದು ಗುಂಪನ್ನು ನೀವು ವಧಿಸುತ್ತಿರುವಿರಿ ಮತ್ತು ಇನ್ನೊಂದು ಗುಂಪನ್ನು ಸೆರೆ ಹಿಡಿಯುತ್ತಿರುವಿರಿ.

وَأَنْزَلَ الَّذِيْنَ ظَاهَرُوْهُمْ مِّنْ أَهْلِ الْكِتٰبِ مِنْ صَيَاصِيْهِمْ وَقَذَفَ فِيْ قُلُوْبِهِمُ الرُّعْبَ فَرِيْقًا تَقْتُلُوْنَ وَتَأْسِرُوْنَ فَرِيْقًا ﴿٢٦﴾

27. ಅವನು ನಿಮ್ಮನ್ನು ಅವರ ಭೂಮಿಯ, ಅವರ ಮನೆಗಳ ಮತ್ತು ಅವರ ಸಂಪತ್ತಿನ ಉತ್ತರಾಧಿಕಾರಿಗಳಾಗಿ ಮಾಡಿ ಬಿಟ್ಟನು. ನೀವೆಂದೂ ಕಾಲಿಟ್ಟಿರದ ಪ್ರದೇಶವನ್ನು ಅವನು ನಿಮಗೆ ಕೊಟ್ಟನು. ಅಲ್ಲಾಹನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು.

وَأَوْرَثَكُمْ أَرْضَهُمْ وَدِيَارَهُمْ وَأَمْوَالَهُمْ وَأَرْضًا لَّمْ تَطَئُوْهَا ۚ وَكَانَ اللّٰهُ عَلٰى كُلِّ شَيْءٍ قَدِيْرًا ﴿٢٧﴾

28. ಪೈಗಂಬರರೇ, ನಿಮ್ಮ ಪತ್ನಿಯರೊಡನೆ ಹೇಳಿರಿ- "ನೀವು ಈ ಲೋಕ ಮತ್ತು ಇದರ ವೈಭವಗಳನ್ನು ಇಚ್ಛಿಸುತ್ತೀರಾದರೆ- ಬನ್ನಿರಿ, ನಾನು ನಿಮಗೇನಾದರೂ ಕೊಡಿಸಿ ನಿಮ್ಮನ್ನು ಉತ್ತಮ ರೀತಿಯಲ್ಲಿ ಬೀಳ್ಕೊಡುತ್ತೇನೆ[7].

يٰٓأَيُّهَا النَّبِيُّ قُلْ لِّأَزْوَاجِكَ إِنْ كُنْتُنَّ تُرِدْنَ الْحَيٰوةَ الدُّنْيَا وَزِيْنَتَهَا فَتَعَالَيْنَ أُمَتِّعْكُنَّ وَأُسَرِّحْكُنَّ سَرَاحًا جَمِيْلًا ﴿٢٨﴾

29. ಮತ್ತು ನೀವು ಅಲ್ಲಾಹ್, ಅವನ ಸಂದೇಶವಾಹಕರು ಮತ್ತು ಪರಲೋಕದ ಬೀಡನ್ನು ಇಚ್ಛಿಸುತ್ತೀರಾದರೆ, ನಿಮ್ಮಲ್ಲಿ ಸಜ್ಜನ ರಾಗಿರುವವರಿಗೆ ಅಲ್ಲಾಹ್ ದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿ ರುತ್ತಾನೆಂಬುದನ್ನು ತಿಳಿದುಕೊಳ್ಳಿರಿ."

وَإِنْ كُنْتُنَّ تُرِدْنَ اللّٰهَ وَرَسُوْلَهُ وَالدَّارَ الْاٰخِرَةَ فَإِنَّ اللّٰهَ أَعَدَّ لِلْمُحْسِنٰتِ مِنْكُنَّ أَجْرًا عَظِيْمًا ﴿٢٩﴾

30. ಪೈಗಂಬರರ ಪತ್ನಿಯರೇ, ನಿಮ್ಮಲ್ಲಿ ವ್ಯಕ್ತವಾದ ಅಶ್ಲೀಲ ಕಾರ್ಯವೆಸಗುವವಳಿಗೆ ಇಮ್ಮಡಿ ಯಾತನೆ ಕೊಡಲಾಗುವುದು.[8] ಇದು ಅಲ್ಲಾಹನಿಗೆ ಅತಿ ಸುಲಭವಾದ ಕೆಲಸ.

يٰنِسَآءَ النَّبِيِّ مَنْ يَّأْتِ مِنْكُنَّ بِفَاحِشَةٍ مُّبَيِّنَةٍ يُّضٰعَفْ لَهَا الْعَذَابُ ضِعْفَيْنِ ۚ وَكَانَ ذٰلِكَ عَلَى اللّٰهِ يَسِيْرًا ﴿٣٠﴾

31. *ಅದಲ್ಲದೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡುವವಳಿಗೆ ಮತ್ತು ಸತ್ಕರ್ಮವೆಸಗುವವಳಿಗೆ ನಾವು ಇಮ್ಮಡಿ ಸತ್ಫಲವನ್ನೀಯುವೆವು. ನಾವು ಅವಳಿಗಾಗಿ ಗೌರವಪೂರ್ಣ ಜೀವನಾಧಾರವನ್ನು ಸಿದ್ಧಗೊಳಿಸಿಟ್ಟಿದ್ದೇವೆ.

وَمَنْ يَّقْنُتْ مِنْكُنَّ لِلّٰهِ وَرَسُوْلِهِ وَتَعْمَلْ صَالِحًا نُّؤْتِهَآ أَجْرَهَا مَرَّتَيْنِ ۙ وَأَعْتَدْنَا لَهَا رِزْقًا كَرِيْمًا ﴿٣١﴾

6. ಅರ್ಥಾತ್- ಕುರೈಝಾ ಗೋತ್ರದ ಯಹೂದಿಯರು.

7. ಪ್ರವಾದಿವರ್ಯರ(ಸ) ಮನೆಯಲ್ಲಿ ಒಪ್ಪೊತ್ತಿನ ಊಟಕ್ಕೂ ಕಷ್ಟವಾಗಿದ್ದ ಮತ್ತು ಪ್ರವಾದಿವರ್ಯರ(ಸ) ಪತ್ನಿಯರು ಕಂಗಾಲಾಗಿದ್ದ ಕಾಲದಲ್ಲಿ ಈ ಸೂಕ್ತ ಅವತೀರ್ಣಗೊಂಡಿತ್ತು.

8. ಪ್ರವಾದಿವರ್ಯರ(ಸ) ಪತ್ನಿಯರ ಬಗ್ಗೆ ಯಾವುದೇ ಅಶ್ಲೀಲ ಕೆಲಸದ ಸಂಶಯವಿತ್ತೆಂಬುದು ಈ ಸೂಕ್ತದ ಅರ್ಥವಲ್ಲ(ಶಾಂತಂ ಪಾಪಂ). ನೀವು ಸಮಸ್ತ ಸಮುದಾಯದ ಮಾತೆಯರಾಗಿದ್ದೀರಿ. ಆದ್ದರಿಂದ ನಿಮ್ಮ ಘನತೆಗೆ ತಕ್ಕುದಲ್ಲದ ಯಾವುದೇ ಕೆಲಸವನ್ನು ಮಾಡದಿರಿ ಎಂಬ ಪ್ರಜ್ಞೆಯನ್ನು ಮೂಡಿಸುವುದೇ ಇದರ ಉದ್ದೇಶ.

***ಇಲ್ಲಿಂದ 22ನೇ ಕಾಂಡ ಆರಂಭ.**

32. ಪೈಗಂಬರರ ಪತ್ನಿಯರೇ, ನೀವು ಸಾಮಾನ್ಯ ಸ್ತ್ರೀಯರಂತಲ್ಲ. ನೀವು ಅಲ್ಲಾಹನನ್ನು ಭಯಪಡುವವರಾಗಿದ್ದರೆ ಮಾನಸಿಕ ಕೇಡಿಗೊಳಗಾದ ವ್ಯಕ್ತಿಯು ಪ್ರಲೋಭನಕ್ಕೊಳಗಾಗಿ ಬಿಡುವ ರೀತಿಯಲ್ಲಿ ಮೋಹಕ ದನಿಯಲ್ಲಿ ಮಾತಾಡಬೇಡಿರಿ. ನಿಖರವಾಗಿ ಮಾತಾಡಿರಿ.

33. ನಿಮ್ಮ ಮನೆಗಳಲ್ಲೇ ಇದ್ದುಕೊಳ್ಳಿರಿ. ಗತ ಅಜ್ಞಾನ ಕಾಲದಂತಹ ಸೌಂದರ್ಯ ಪ್ರದರ್ಶನ ಮಾಡುತ್ತ ತಿರುಗಾಡಬೇಡಿರಿ. ನಮಾಝನ್ನು ಸಂಸ್ಥಾಪಿಸಿರಿ, ಝಕಾತ್ ಕೊಡಿರಿ, ಅಲ್ಲಾಹ್ ಮತ್ತು ಅವನ ರಸೂಲನ್ನು ಅನುಸರಿಸಿರಿ. ರಸೂಲರ ಮನೆಯವರಾದ ನಿಮ್ಮಿಂದ ಮಾಲಿನ್ಯವನ್ನು ದೂರೀಕರಿಸಿ ನಿಮ್ಮನ್ನು ಸಂಪೂರ್ಣವಾಗಿ ಶುದ್ಧಿಗೊಳಿಸಲು ಅಲ್ಲಾಹ್ ಇಚ್ಛಿಸುತ್ತಾನೆ.

34. ನಿಮ್ಮ ಮನೆಗಳಲ್ಲಿ ಓದಿ ಹೇಳಲಾಗುತ್ತಿರುವ ಅಲ್ಲಾಹನ ಸೂಕ್ತಗಳನ್ನೂ ಯುಕ್ತಿಪೂರ್ಣ ಮಾತುಗಳನ್ನೂ ಚೆನ್ನಾಗಿ ನೆನಪಿಡಿರಿ. ನಿಶ್ಚಯವಾಗಿಯೂ ಅಲ್ಲಾಹ್ ಸೂಕ್ಷ್ಮಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.[9]

35. ನಿಶ್ಚಯವಾಗಿಯೂ ಮುಸ್ಲಿಮರೂ ಸತ್ಯವಿಶ್ವಾಸಿಗಳೂ ಆಜ್ಞಾಪಾಲಕರೂ ಸತ್ಯಸಂಧರೂ ಸಹನಶೀಲರೂ ವಿನಮ್ರರೂ ದಾನಶೀಲರೂ ಉಪವಾಸ ವ್ರತವನ್ನಾಚರಿಸುವವರೂ ತಮ್ಮ ಗುಪ್ತಾಂಗಗಳ ರಕ್ಷಣೆ ಮಾಡಿಕೊಳ್ಳುವವರೂ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರೂ ಆದ ಎಲ್ಲಾ ಪುರುಷರು ಮತ್ತು ಸ್ತ್ರೀಯರಿಗೆ ಅಲ್ಲಾಹನು ಕ್ಷಮೆ ಮತ್ತು ಅತಿ ದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ.

36. ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಯಾವುದಾದರೊಂದು ವಿಷಯದ ತೀರ್ಮಾನ ಮಾಡಿಬಿಟ್ಟರೆ ಆ ವಿಷಯದಲ್ಲಿ ಸ್ವತಃ ತೀರ್ಮಾನ ಕೈಗೊಳ್ಳುವ ಹಕ್ಕು (ಸತ್ಯವಿಶ್ವಾಸಿಗಳಾದ) ಯಾವ ಸ್ತ್ರೀ-ಪುರುಷರಿಗೂ ಇಲ್ಲ. ಯಾರಾದರೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದರೆ, ಅವನು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದುಬಿಟ್ಟನು.

يٰنِسَآءَ النَّبِيِّ لَسْتُنَّ كَاَحَدٍ مِّنَ
النِّسَآءِ اِنِ اتَّقَيْتُنَّ فَلَا تَخْضَعْنَ
بِالْقَوْلِ فَيَطْمَعَ الَّذِيْ فِيْ قَلْبِهٖ
مَرَضٌ وَّقُلْنَ قَوْلًا مَّعْرُوْفًا ﴿٣٢﴾
وَقَرْنَ فِيْ بُيُوْتِكُنَّ وَلَا تَبَرَّجْنَ
تَبَرُّجَ الْجَاهِلِيَّةِ الْاُوْلٰى وَاَقِمْنَ الصَّلٰوةَ
وَاٰتِيْنَ الزَّكٰوةَ وَاَطِعْنَ اللّٰهَ وَرَسُوْلَهٗ
اِنَّمَا يُرِيْدُ اللّٰهُ لِيُذْهِبَ عَنْكُمُ
الرِّجْسَ اَهْلَ الْبَيْتِ وَيُطَهِّرَكُمْ تَطْهِيْرًا ﴿٣٣﴾
وَاذْكُرْنَ مَا يُتْلٰى فِيْ بُيُوْتِكُنَّ مِنْ
اٰيٰتِ اللّٰهِ وَالْحِكْمَةِ اِنَّ اللّٰهَ كَانَ
لَطِيْفًا خَبِيْرًا ﴿٣٤﴾ ع

اِنَّ الْمُسْلِمِيْنَ وَالْمُسْلِمٰتِ وَالْمُؤْمِنِيْنَ
وَالْمُؤْمِنٰتِ وَالْقٰنِتِيْنَ وَالْقٰنِتٰتِ وَ
الصّٰدِقِيْنَ وَالصّٰدِقٰتِ وَالصّٰبِرِيْنَ
وَالصّٰبِرٰتِ وَالْخٰشِعِيْنَ وَالْخٰشِعٰتِ وَ
الْمُتَصَدِّقِيْنَ وَالْمُتَصَدِّقٰتِ وَالصَّآئِمِيْنَ
وَالصّٰٓئِمٰتِ وَالْحٰفِظِيْنَ فُرُوْجَهُمْ
وَالْحٰفِظٰتِ وَالذّٰكِرِيْنَ اللّٰهَ كَثِيْرًا
وَّالذّٰكِرٰتِ اَعَدَّ اللّٰهُ لَهُمْ مَّغْفِرَةً
وَّاَجْرًا عَظِيْمًا ﴿٣٥﴾
وَمَا كَانَ لِمُؤْمِنٍ وَّلَا مُؤْمِنَةٍ
اِذَا قَضَى اللّٰهُ وَرَسُوْلُهٗ اَمْرًا اَنْ
يَّكُوْنَ لَهُمُ الْخِيَرَةُ مِنْ اَمْرِهِمْ
وَمَنْ يَّعْصِ اللّٰهَ وَرَسُوْلَهٗ فَقَدْ
ضَلَّ ضَلٰلًا مُّبِيْنًا ﴿٣٦﴾

9. ಅರ್ಥಾತ್- ಅತ್ಯಂತ ಗೌಪ್ಯವಾದ ವಿಷಯಗಳನ್ನೂ ಬಲ್ಲವನು.

وَاِذۡ تَقُوۡلُ لِلَّذِىۡۤ اَنۡعَمَ اللّٰهُ عَلَيۡهِ
وَاَنۡعَمۡتَ عَلَيۡهِ اَمۡسِكۡ عَلَيۡكَ زَوۡجَكَ
وَاتَّقِ اللّٰهَ وَتُخۡفِىۡ فِىۡ نَفۡسِكَ مَا اللّٰهُ
مُبۡدِيۡهِ وَتَخۡشَى النَّاسَ‌ ۚ وَاللّٰهُ اَحَقُّ
اَنۡ تَخۡشٰٮهُ‌ ؕ فَلَمَّا قَضٰى زَيۡدٌ مِّنۡهَا
وَطَرًا زَوَّجۡنٰكَهَا لِكَىۡ لَا يَكُوۡنَ عَلَى
الۡمُؤۡمِنِيۡنَ حَرَجٌ فِىۡۤ اَزۡوَاجِ اَدۡعِيَآٮِٕهِمۡ
اِذَا قَضَوۡا مِنۡهُنَّ وَطَرًا‌ ؕ وَكَانَ
اَمۡرُ اللّٰهِ مَفۡعُوۡلًا ﴿۳۷﴾

37. ಪೈಗಂಬರರೇ, ಅಲ್ಲಾಹನೂ ನೀವೂ ಯಾರಿಗೆ ಉಪಕಾರ ಮಾಡಿದ್ದಿರೋ ಆ ವ್ಯಕ್ತಿಯೊಡನೆ ನೀವು, "ನಿನ್ನ ಪತ್ನಿಯನ್ನು ಬಿಡಬೇಡ ಮತ್ತು ಅಲ್ಲಾಹನನ್ನು ಭಯಪಡು" ಎಂದು ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.[10] ಆ ವೇಳೆ ಅಲ್ಲಾಹ್ ಬಹಿರಂಗ ಗೊಳಿಸಲು ಇಚ್ಛಿಸಿದ್ದ ವಿಷಯವನ್ನು ನೀವು ನಿಮ್ಮ ಹೃದಯ ದೊಳಗೆ ಬಚ್ಚಿಟ್ಟಿದ್ದಿರಿ. ನೀವು ಜನರಿಗೆ ಹೆದರುತ್ತಿದ್ದಿರಿ. ನಿಜವಾಗಿ ಭಯಪಡಲು ಅಲ್ಲಾಹನು ಅಧಿಕ ಹಕ್ಕುದಾರನಾಗಿದ್ದಾನೆ.[11] ತರುವಾಯ ಝೈದ್ ಅವಳಿಂದ ತನ್ನ ಅಪೇಕ್ಷೆಯನ್ನು ಪೂರ್ತಿಗೊಳಿಸಿ ಕೊಂಡ ಬಳಿಕ[12] ನಾವು ಅವಳ ವಿವಾಹವನ್ನು ನಿಮ್ಮೊಂದಿಗೆ ಮಾಡಿದೆವು. (ಇದು) ದತ್ತುಪುತ್ರರು ತಮ್ಮ ಪತ್ನಿಯರೊಂದಿಗೆ ತಮ್ಮ ಅಪೇಕ್ಷೆ ಪೂರ್ತಿಗೊಳಿಸಿ ಕೊಂಡ ಬಳಿಕ ಅವರ (ವಿಚ್ಛೇದಿತೆಯರ) ವಿಷಯದಲ್ಲಿ ಸತ್ಯವಿಶ್ವಾಸಿಗಳಿಗೆ ಯಾವುದೇ ಅಡಚಣೆ ಇಲ್ಲದಂತಾಗಲಿಕ್ಕಾಗಿ (ಆಗಿದೆ). ಅಲ್ಲಾಹನ ಆಜ್ಞೆಯಂತು ಜಾರಿಗೆ ಬಂದೇ ತೀರಬೇಕಿತ್ತು.

مَا كَانَ عَلَى النَّبِىِّ مِنۡ حَرَجٍ فِيۡمَا
فَرَضَ اللّٰهُ لَهٗ‌ ؕ سُنَّةَ اللّٰهِ فِى الَّذِيۡنَ
خَلَوۡا مِنۡ قَبۡلُ‌ ؕ وَكَانَ اَمۡرُ اللّٰهِ
قَدَرًا مَّقۡدُوۡرَا ۙ﴿۳۸﴾

38. ಅಲ್ಲಾಹನು ಪ್ರವಾದಿಗಾಗಿ ನಿಶ್ಚಯಿಸಿ ಬಿಟ್ಟಿರುವಂತಹ ಕಾರ್ಯದಲ್ಲಿ ಪ್ರವಾದಿಗೆ ಯಾವ ಅಡಚಣೆಯೂ ಇಲ್ಲ. ಅಲ್ಲಾಹನ ಇದೇ ನಿಯಮವು ಹಿಂದೆ ಗತಿಸಿ ಹೋಗಿದ್ದ ಪ್ರವಾದಿಗಳ ವಿಷಯದಲ್ಲೂ ಜಾರಿಯಲ್ಲಿತ್ತು. ಅಲ್ಲಾಹನ ಆಜ್ಞೆಯು ಒಂದು ಖಚಿತವಾಗಿ ನಿರ್ಧರಿಸಿದ ತೀರ್ಪಾಗಿರುತ್ತದೆ.

اۨلَّذِيۡنَ يُبَلِّغُوۡنَ رِسٰلٰتِ اللّٰهِ وَيَخۡشَوۡنَهٗ
وَلَا يَخۡشَوۡنَ اَحَدًا اِلَّا اللّٰهَ‌ ؕ وَكَفٰى
بِاللّٰهِ حَسِيۡبًا ﴿۳۹﴾

39. ಅಲ್ಲಾಹನ ಸಂದೇಶಗಳನ್ನು ತಲುಪಿಸುವ ಅವನನ್ನೇ ಭಯಪಡುವ ಮತ್ತು ಒಬ್ಬ ದೇವನ ಹೊರತು ಯಾರನ್ನೂ ಭಯಪಡದವರಿಗೆ (ಇರುವ, ಅಲ್ಲಾಹನ ನಿಯಮವಿದು) ಮತ್ತು ವಿಚಾರಣೆ ನಡೆಸಲು ಅಲ್ಲಾಹನೇ ಸಾಕು.

10. ಆ ವ್ಯಕ್ತಿಯೆಂದರೆ ಹ. ಝೈದ್ ಬಿನ್ ಹಾರಿಸ್(ರ). ಅವರು ಪ್ರವಾದಿವರ್ಯರು(ಸ) ಸ್ವತಂತ್ರ ಗೊಳಿಸಿದ ಗುಲಾಮ ಮತ್ತು ಅವರ ದತ್ತು ಪುತ್ರರಾಗಿದ್ದರು. ಅವರ ಪತ್ನಿಯೆಂದರೆ ಪ್ರವಾದಿವರ್ಯರ(ಸ) ಸೋದರತ್ತೆಯ ಮಗಳಾದ ಹ. ಝೈನಬ್(ರ). ಪ್ರವಾದಿವರ್ಯರು(ಸ) ಅವರನ್ನು ಹ. ಝೈನಬ್‌ರ(ರ) ಜತೆ ವಿವಾಹ ಮಾಡಿಸಿದ್ದರು. ಆದರೆ ಅವರಿಬ್ಬರ ನಡುವೆ ಹೊಂದಾಣಿಕೆಯಾಗುತ್ತಿರಲಿಲ್ಲ. ಹ. ಝೈದ್(ರ) ಅವರಿಗೆ ವಿವಾಹ ವಿಚ್ಛೇದನ ಕೊಡಲು ಸನ್ನದ್ಧರಾಗಿದ್ದರು.

11. ಅರ್ಥಾತ್- ಹ. ಝೈದ್(ರ), ಹ. ಝೈನಬ್‌ರಿಗೆ(ರ) ತಲಾಕ್ ನೀಡಿದಾಗ ಪ್ರವಾದಿವರ್ಯರು(ಸ) ಸ್ವತಃ ಅವರನ್ನು ವಿವಾಹವಾಗಿ, ದತ್ತು ಪುತ್ರನನ್ನು ನಿಜವಾದ ಪುತ್ರನೆಂದೇ ಭಾವಿಸಲಾಗುತ್ತಿದ್ದ ಅರೇಬಿಯಾದ ಪುರಾತನ ಸಂಪ್ರದಾಯವನ್ನು ಮುರಿಯಬೇಕೆಂಬುದು ಅಲ್ಲಾಹನ ಇಚ್ಛೆಯಾಗಿತ್ತು. ಆದರೆ ಈ ಬಗ್ಗೆ ಅರಬ್ ನಿವಾಸಿಗಳು ತೀವ್ರ ಟೀಕೆಗಳನ್ನು ಮಾಡುವರೆಂಬ ಆಶಂಕೆಯಿಂದ ಪ್ರವಾದಿವರ್ಯರು(ಸ) ಈ ಪರೀಕ್ಷೆಯಿಂದ ದೂರ ಉಳಿಯಬಯಸಿದ್ದರು. ಆದ್ದರಿಂದ ಝೈದ್ ತಮ್ಮ ಪತ್ನಿಗೆ ತಲಾಕ್ ಕೊಡದಂತೆ ಪ್ರವಾದಿವರ್ಯರು(ಸ) ಪ್ರಯತ್ನಿಸಿದರು.

12. ಅರ್ಥಾತ್- ತಲಾಕ್ ಕೊಡುವ ತಮ್ಮ ಬಯಕೆಯನ್ನು ಈಡೇರಿಸಿದರು. ಹೀಗೆ ವಿಚ್ಛೇದಿತ ಪತ್ನಿಗೂ ಅವರಿಗೂ ಯಾವುದೇ ಸಂಬಂಧ ಇಲ್ಲದಂತಾಯಿತು.

40. (ಜನರೇ) ಮುಹಮ್ಮದ್‌ರು ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ. ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿರುತ್ತಾರೆ. ಅಲ್ಲಾಹನು ಸಕಲ ವಸ್ತುಗಳ ಪರಿಜ್ಞಾನವುಳ್ಳವನು.[13]

مَا كَانَ مُحَمَّدٌ أَبَآ أَحَدٍ مِّن رِّجَالِكُمْ وَلَٰكِن رَّسُولَ اللَّهِ وَخَاتَمَ النَّبِيِّينَ ۗ وَكَانَ اللَّهُ بِكُلِّ شَيْءٍ عَلِيمًا ﴿٤٠﴾

41. ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಬಹಳವಾಗಿ ಸ್ಮರಿಸಿರಿ-

يَٰٓأَيُّهَا الَّذِينَ ءَامَنُوا اذْكُرُوا اللَّهَ ذِكْرًا كَثِيرًا ﴿٤١﴾

42. ಮತ್ತು ಬೆಳಗು ಬೈಗುಗಳಲ್ಲಿ ಅವನ ಗುಣಗಾನ ಮಾಡುತ್ತಲಿರಿ.

وَسَبِّحُوهُ بُكْرَةً وَأَصِيلًا ﴿٤٢﴾

43. ಅವನೇ ನಿಮ್ಮ ಮೇಲೆ ಕೃಪೆ ತೋರುವವನು ಮತ್ತು ಅವನು ನಿಮ್ಮನ್ನು ಅಂಧಕಾರಗಳಿಂದ ಪ್ರಕಾಶದ ಕಡೆಗೆ ತರುವಂತೆ ಅವನ ದೇವಚರರು ನಿಮಗಾಗಿ ಕೃಪಾ ಪ್ರಾರ್ಥನೆ ಮಾಡುತ್ತಾರೆ. ಅವನು ಸತ್ಯವಿಶ್ವಾಸಿಗಳ ಮೇಲೆ ತುಂಬಾ ಕರುಣೆಯುಳ್ಳವನು.

هُوَ الَّذِى يُصَلِّى عَلَيْكُمْ وَمَلَٰٓئِكَتُهُۥ لِيُخْرِجَكُم مِّنَ الظُّلُمَٰتِ إِلَى النُّورِ ۚ وَكَانَ بِالْمُؤْمِنِينَ رَحِيمًا ﴿٤٣﴾

44. ಅವನನ್ನು ಅವರು ಭೇಟಿಯಾಗುವ ದಿನ ಅವರನ್ನು 'ಸಲಾಮ್' ನೊಂದಿಗೆ ಸ್ವಾಗತಿಸಲಾಗುವುದು ಮತ್ತು ಅಲ್ಲಾಹನು ಅವರಿಗಾಗಿ ಅತ್ಯಂತ ಗೌರವಪೂರ್ಣ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ.

تَحِيَّتُهُمْ يَوْمَ يَلْقَوْنَهُۥ سَلَٰمٌ ۚ وَأَعَدَّ لَهُمْ أَجْرًا كَرِيمًا ﴿٤٤﴾

45. ಪೈಗಂಬರರೇ, ನಾವು ನಿಮ್ಮನ್ನು ಸಾಕ್ಷಿದಾರರಾಗಿಯೂ ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿಯೂ-

يَٰٓأَيُّهَا النَّبِىُّ إِنَّآ أَرْسَلْنَٰكَ شَٰهِدًا وَمُبَشِّرًا وَنَذِيرًا ﴿٤٥﴾

46. ಅಲ್ಲಾಹನ ಅನುಮತಿಯಿಂದ ಅವನ ಕಡೆಗೆ ಕರೆ ನೀಡುವವರಾಗಿಯೂ ಪ್ರಕಾಶಮಯ ಜ್ಯೋತಿಯಾಗಿಯೂ ಮಾಡಿ ಕಳುಹಿಸಿರುತ್ತೇವೆ.

وَدَاعِيًا إِلَى اللَّهِ بِإِذْنِهِۦ وَسِرَاجًا مُّنِيرًا ﴿٤٦﴾

13. ಪ್ರವಾದಿವರ್ಯರ(ಸ) ಪ್ರಸ್ತುತ ವಿವಾಹದ ಕುರಿತು ವಿರೋಧಿಗಳು ಮಾಡುತ್ತಿದ್ದ ಎಲ್ಲಾ ಆಕ್ಷೇಪಗಳ ಬುಡವನ್ನೇ ಈ ಸೂಕ್ತದ ಮೂಲಕ ಕಿತ್ತೊಗೆಯಲಾಗಿದೆ. ಅವರು ತಮ್ಮ ಸೊಸೆಯನ್ನೇ ವಿವಾಹವಾಗಿದ್ದಾರೆ ಎಂಬುದು ಅವರ ಮೊಟ್ಟ ಮೊದಲ ಆಕ್ಷೇಪವಾಗಿತ್ತು. ಅದಕ್ಕುತ್ತರವಾಗಿ 'ಮುಹಮ್ಮದ್(ಸ) ನಿಮ್ಮ ಪುರುಷರ ಪೈಕಿ ಯಾರ ತಂದೆಯೂ ಅಲ್ಲ' ಎಂದು ಹೇಳಲಾಗಿದೆ. ಅರ್ಥಾತ್ ಅವರ ವಿಚ್ಛೇದಿತ ಪತ್ನಿ ನಿಷಿದ್ಧವಾಗಲು ಅವರು ನೈಜ ಪುತ್ರರಾಗಿದ್ದುದು ಯಾವಾಗ? ದತ್ತುಪುತ್ರನು ನಿಜವಾದ ಪುತ್ರನಂತೆ ಅಲ್ಲದಿದ್ದರೂ ಅವರ ವಿಚ್ಛೇದಿತ ಪತ್ನಿಯೊಂದಿಗೆ ವಿವಾಹವಾಗುವ ಔಚಿತ್ಯವೇನಿತ್ತು ಎಂಬುದು ಅವರ ಎರಡನೇ ಆಕ್ಷೇಪವಾಗಿತ್ತು. ಅದಕ್ಕುತ್ತರವಾಗಿ 'ಆದರೆ ಅವರು ಅಲ್ಲಾಹನ ಪ್ರವಾದಿಯಾಗಿದ್ದಾರೆ' ಎಂದು ಹೇಳಲಾಗಿದೆ. ಅರ್ಥಾತ್ ಯಾವ ಸಿಂಧು ಕಾರ್ಯಗಳನ್ನು ನಿಮ್ಮ ಸಂಪ್ರದಾಯಗಳು ವಿನಾಕಾರಣ ನಿಷಿದ್ಧಗೊಳಿಸಿಬಿಟ್ಟಿದೆಯೋ ಆ ಬಗ್ಗೆ ಇರುವ ಎಲ್ಲಾ ಪೂರ್ವಗ್ರಹಗಳನ್ನು ಅಳಿಸಿ ಬಿಡುವುದು ಮತ್ತು ಅದರ ಸಿಂಧುತ್ವದ ಬಗ್ಗೆ ಯಾವುದೇ ಆಶಂಕೆಯನ್ನು ಬಾಕಿಯುಳಿಸದಿರುವುದು ಪ್ರವಾದಿಯ ಮೇಲಿನ ಬಾಧ್ಯತೆಯಾಗಿದೆ. ಅನಂತರ ಮುಂದುವರಿದು, 'ಅವರು ಅಂತಿಮ ಪ್ರವಾದಿಯಾಗಿದ್ದಾರೆ' ಎಂದು ಹೇಳಲಾಯಿತು. ಅರ್ಥಾತ್ ಅವರ ನಂತರ ಯಾವುದೇ 'ರಸೂಲ'ರು ಬರುವುದಂತಿರಲಿ, ಯಾವುದೇ 'ನಬಿ'ಯೂ ಬರಲಿಕ್ಕಿಲ್ಲ. ಆದ್ದರಿಂದ ಸಮಾಜದ ಯಾವುದೇ ಕಾನೂನಿನ ಸುಧಾರಣೆ ಅವರ ಕಾಲದಲ್ಲಿ ಜಾರಿಗೆ ಬರದೇ ಹೋದರೆ ನಂತರ ಆ ಲೋಪವನ್ನು ತುಂಬಲು ಪ್ರವಾದಿಯ ಆಗಮನವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ ಈ ಅಜ್ಞಾನಕಾಲದ ಸಂಪ್ರದಾಯವನ್ನು ಅವರು ಸ್ವತಃ ಅಳಿಸುವ ಅವಶ್ಯಕತೆ ಇದೆ. ಅನಂತರ ಇನ್ನಷ್ಟು ಒತ್ತುಕೊಟ್ಟು, 'ಅಲ್ಲಾಹನು ಎಲ್ಲಾ ವಿಷಯಗಳ ಬಗ್ಗೆ ಜ್ಞಾನ ಉಳ್ಳವನು' ಎಂದು ಹೇಳಲಾಗಿದೆ. ಅರ್ಥಾತ್ ಪ್ರವಾದಿವರ್ಯರ(ಸ) ಮೂಲಕ ಆ ಅಜ್ಞಾನಜನ್ಯ ಸಂಪ್ರದಾಯವನ್ನು ಕೊನೆಗೊಳಿಸಿ ಬಿಡುವುದರ ಔಚಿತ್ಯವೇನು ಮತ್ತು ಹಾಗೆ ಮಾಡದೆ ಇರುವುದರಲ್ಲಿ ಯಾವ ಕೇಡಿದೆ ಎಂಬುದನ್ನು ಅಲ್ಲಾಹನು ಬಲ್ಲನು.

47. ಅಲ್ಲಾಹನ ಕಡೆಯಿಂದ ಅವರಿಗಾಗಿ ಮಹಾ ಅನುಗ್ರಹವಿದೆ ಎಂಬ ಸುವಾರ್ತೆಯನ್ನು ಸತ್ಯವಿಶ್ವಾಸಿಗಳಿಗೆ ತಿಳಿಸಿ ಬಿಡಿರಿ.

وَبَشِّرِ الْمُؤْمِنِينَ بِأَنَّ لَهُمْ مِنَ اللَّهِ فَضْلًا كَبِيرًا ﴿٤٧﴾

48. ಮತ್ತು ಸತ್ಯನಿಷೇಧಿಗಳಿಗೂ ಕಪಟವಿಶ್ವಾಸಿಗಳಿಗೂ ಎಷ್ಟು ಮಾತ್ರಕ್ಕೂ ಮಣಿಯದಿರಿ. ಅವರ ಕಿರುಕುಳಗಳನ್ನು ಕಡೆಗಣಿಸಿರಿ.[14] ಅಲ್ಲಾಹನ ಮೇಲೆ ಭರವಸೆ ಇಡಿರಿ. ಮನುಷ್ಯನು ತನ್ನ ವ್ಯವಹಾರ ಗಳನ್ನು ಒಪ್ಪಿಸಲು ಅಲ್ಲಾಹನೇ ಸಾಕು.

وَلَا تُطِعِ الْكَافِرِينَ وَالْمُنَافِقِينَ وَدَعْ أَذَاهُمْ وَتَوَكَّلْ عَلَى اللَّهِ ۚ وَكَفَىٰ بِاللَّهِ وَكِيلًا ﴿٤٨﴾

49. ಸತ್ಯವಿಶ್ವಾಸಿಗಳೇ, ನೀವು ಸತ್ಯವಿಶ್ವಾಸಿನಿಯರೊಂದಿಗೆ ನಿಕಾಹ್ ಮಾಡಿ ಅವರನ್ನು ಮುಟ್ಟುವುದಕ್ಕೆ ಮುಂಚೆ ತಲಾಕ್ ಕೊಟ್ಟು ಬಿಟ್ಟರೆ, ನಿಮ್ಮ ಕಡೆಯಿಂದ ಅವರ ಮೇಲೆ ಯಾವುದೇ ಇದ್ದತ್ ಪೂರ್ಣಗೊಳ್ಳಬೇಕೆಂದಿಲ್ಲ. ಆದುದರಿಂದ ಏನಾದರೂ ಸಂಭಾವನೆ ಕೊಡಿರಿ ಮತ್ತು ಉತ್ತಮ ರೀತಿಯಿಂದ ಬೀಳ್ಕೊಡಿರಿ.

يَا أَيُّهَا الَّذِينَ آمَنُوا إِذَا نَكَحْتُمُ الْمُؤْمِنَاتِ ثُمَّ طَلَّقْتُمُوهُنَّ مِنْ قَبْلِ أَنْ تَمَسُّوهُنَّ فَمَا لَكُمْ عَلَيْهِنَّ مِنْ عِدَّةٍ تَعْتَدُّونَهَا ۖ فَمَتِّعُوهُنَّ وَسَرِّحُوهُنَّ سَرَاحًا جَمِيلًا ﴿٤٩﴾

50. ಪೈಗಂಬರರೇ, ನೀವು 'ವಿವಾಹ ಧನ' ಕೊಟ್ಟಿರುವಂತಹ ನಿಮ್ಮ ಪತ್ನಿಯರನ್ನೂ[15] ಅಲ್ಲಾಹನಿಂದ ಪ್ರದಾನವಾಗಿರುವ ದಾಸಿಯರ ಪೈಕಿ ನಿಮ್ಮ ಸ್ವಾಧೀನತೆಗೆ ಬಂದಿರುವವರನ್ನೂ ನಿಮ್ಮ ಜೊತೆ ವಲಸೆ ಬಂದಿರುವ ನಿಮ್ಮ ತಂದೆಯ ಸಹೋದರ-ಸಹೋದರಿಯರ ಮತ್ತು ತಾಯಿಯ ಸಹೋದರ-ಸಹೋದರಿಯರ ಪುತ್ರಿಯರನ್ನೂ ನಾವು ನಿಮಗೆ 'ಧರ್ಮಸಮ್ಮತ'ಗೊಳಿಸಿರುತ್ತೇವೆ. ತನ್ನನ್ನು ತಾನೇ ಪ್ರವಾದಿಗೆ 'ಹಿಬಃ' ರೂಪದಲ್ಲಿ(ಕೊಡುಗೆಯಾಗಿ) ಕೊಟ್ಟಿದ್ದು, ಪ್ರವಾದಿಯು ಅವಳನ್ನು ತನ್ನ ನಿಕಾಹ್‌ದಲ್ಲಿ ಸ್ವೀಕರಿ ಸಲು ಒಪ್ಪಿಕೊಂಡರೆ,[16] ಅಂತಹ ಸತ್ಯವಿಶ್ವಾಸಿನಿಯರನ್ನೂ ನಾವು ನಿಮಗಾಗಿ 'ಧರ್ಮಸಮ್ಮತ'ಗೊಳಿಸಿರುತ್ತೇವೆ. ಈ ಅನುಮತಿಯು ನಿಮಗಾಗಿ ಮಾತ್ರವಿದೆ, ಬೇರೆ ಸತ್ಯವಿಶ್ವಾಸಿಗಳಿಗೆ ಇಲ್ಲ. ನಾವು

يَا أَيُّهَا النَّبِيُّ إِنَّا أَحْلَلْنَا لَكَ أَزْوَاجَكَ اللَّاتِي آتَيْتَ أُجُورَهُنَّ وَمَا مَلَكَتْ يَمِينُكَ مِمَّا أَفَاءَ اللَّهُ عَلَيْكَ وَبَنَاتِ عَمِّكَ وَبَنَاتِ عَمَّاتِكَ وَبَنَاتِ خَالِكَ وَبَنَاتِ خَالَاتِكَ اللَّاتِي هَاجَرْنَ مَعَكَ وَامْرَأَةً مُؤْمِنَةً إِنْ وَهَبَتْ نَفْسَهَا لِلنَّبِيِّ إِنْ أَرَادَ النَّبِيُّ أَنْ يَسْتَنْكِحَهَا خَالِصَةً لَكَ مِنْ دُونِ الْمُؤْمِنِينَ ۗ قَدْ

---

14. ಅರ್ಥಾತ್- ಈ ನಿಕಾಹ್‌ನ ಬಗ್ಗೆ ಅವರು ಮಾಡುತ್ತಿರುವ ಆಕ್ಷೇಪಗಳ ಕುರಿತು.

15. ಇತರರು ಒಂದು ಬಾರಿಗೆ ನಾಲ್ಕಕ್ಕಿಂತ ಹೆಚ್ಚು ವಿವಾಹವಾಗುವುದು ನಿಷಿದ್ಧವೆಂದು ಪ್ರವಾದಿವರ್ಯರು(ಸ) ಸಾರುತ್ತಾರೆ. ಆದರೆ ಅವರು ಸ್ವತಃ ಈ ಐದನೆಯ ಪತ್ನಿಯನ್ನು ಹೇಗೆ ಇಟ್ಟುಕೊಂಡರು? ಎಂದು ಅವರು ಮಾಡುತ್ತಿದ್ದ ಆಕ್ಷೇಪಗಳಿಗೆ ಈ ಮೂಲಕ ಉತ್ತರಿಸಲಾಗಿದೆ. ಆ ವೇಳೆ ಪ್ರವಾದಿವರ್ಯರ(ಸ) ಮನೆಯಲ್ಲಿ ನಾಲ್ವರು ಪತ್ನಿಯರು, ಹ.ಆಯಿಶಾ, ಹ.ಸೌದಾ, ಹ.ಹಫ್ಸಾ ಮತ್ತು ಹ.ಉಮ್ಮುಸಲ್ಮಾ(ರ) ಉಪಸ್ಥಿತರಿದ್ದರೆಂಬುದು ಗಮನಾರ್ಹ.

16. ಅರ್ಥಾತ್- ಪ್ರಸ್ತುತ ಐದು ಪತ್ನಿಯರಲ್ಲದೆ ಸೂಕ್ತದಲ್ಲಿ ಪ್ರಸ್ತಾಪಿಸಲಾಗಿರುವಂತಹ ಇತರ ಸ್ತ್ರೀಯರನ್ನೂ ಪತ್ನಿಯಾಗಿ ಪಡೆಯುವ ಅನುಮತಿ ಪ್ರವಾದಿವರ್ಯರಿಗೆ(ಸ) ಇದೆ.

ಸಾಮಾನ್ಯ ಸತ್ಯವಿಶ್ವಾಸಿಗಳ ಮೇಲೆ ಅವರ ಪತ್ನಿಯರ ಹಾಗೂ ದಾಸಿಯರ ವಿಷಯದಲ್ಲಿ ಯಾವ ಮಿತಿಗಳನ್ನು ಹೇರಿರುತ್ತೇವೆ ಎಂಬುದು ನಮಗೆ ಗೊತ್ತಿದೆ. ನಿಮ್ಮ ಮೇಲೆ ಯಾವ ಜಟಿಲತೆಯೂ ಇರದಂತಾಗಲು (ನಾವು ನಿಮ್ಮನ್ನು ಈ ಮಿತಿ ಮೇರೆಗಳಿಂದ ಮುಕ್ತಗೊಳಿಸಿದ್ದೇವೆ.) ಅಲ್ಲಾಹನು ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.

عَلِمْنَا مَا فَرَضْنَا عَلَيْهِمْ فِيٓ أَزْوَاجِهِمْ
وَمَا مَلَكَتْ أَيْمَانُهُمْ لِكَيْلَا يَكُونَ
عَلَيْكَ حَرَجٌ ۗ وَكَانَ اللّٰهُ غَفُورًا رَّحِيمًا ﴿٥٠﴾

51. ನಿಮ್ಮ ಪತ್ನಿಯರ ಪೈಕಿ ನಿಮಗೆ ಇಷ್ಟವಿದ್ದವರನ್ನು ನಿಮ್ಮಿಂದ ದೂರವಿರಿಸಲಿಕ್ಕೂ ನಿಮಗೆ ಇಷ್ಟ ಬಂದವರನ್ನು ಜೊತೆ ಇರಿಸಿ ಕೊಳ್ಳಲಿಕ್ಕೂ ದೂರವಿರಿಸಿದ ಬಳಿಕ ನಿಮಗೆ ಇಷ್ಟವಿದ್ದವರನ್ನು ನಿಮ್ಮ ಬಳಿಗೆ ಕರೆಸಿಕೊಳ್ಳಲಿಕ್ಕೂ ನಿಮಗೆ ಅಧಿಕಾರ ಕೊಡಲಾಗು ತ್ತದೆ. ಈ ವಿಷಯದಲ್ಲಿ ನಿಮಗೇನೂ ಆತಂಕವಿಲ್ಲ. ಇದರಿಂದ ಅವರ ಕಣ್ಣುಗಳು ತಣಿದಿರುವುದೆಂದೂ ಅವರು ಬೇಸರಿಸ ಲಾರರೆಂದೂ ನಿರೀಕ್ಷೆ ಇದೆ ಮತ್ತು ನೀವು ಅವರಿಗೆ ಕೊಟ್ಟುದರಲ್ಲಿ ಅವರೆಲ್ಲರೂ ತೃಪ್ತಿ ಪಟ್ಟುಕೊಂಡಿರುವರು. ನಿಮ್ಮ ಹೃದಯಗಳಲ್ಲಿ ಇರುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ ಮತ್ತು ಅಲ್ಲಾಹನು ಸರ್ವಜ್ಞನೂ ಸಹನಶೀಲನೂ ಆಗಿರುತ್ತಾನೆ.

تُرْجِي مَنْ تَشَآءُ مِنْهُنَّ وَتُـْٔوِيٓ إِلَيْكَ
مَنْ تَشَآءُ ۖ وَمَنِ ابْتَغَيْتَ مِمَّنْ عَزَلْتَ
فَلَا جُنَاحَ عَلَيْكَ ۚ ذٰلِكَ أَدْنٰىٓ أَنْ تَقَرَّ
أَعْيُنُهُنَّ وَلَا يَحْزَنَّ وَيَرْضَيْنَ بِمَآ
آتَيْتَهُنَّ كُلُّهُنَّ ۚ وَاللّٰهُ يَعْلَمُ مَا فِي
قُلُوبِكُمْ ۚ وَكَانَ اللّٰهُ عَلِيمًا حَلِيمًا ﴿٥١﴾

52. ಇನ್ನು ಮುಂದೆ ನಿಮಗೆ ಇತರ ಸ್ತ್ರೀಯರು 'ಧರ್ಮಸಮ್ಮತ' ಆಗಿರುವುದಿಲ್ಲ. ಇತರ ಪತ್ನಿಯರನ್ನು ಅವರ ಸೌಂದರ್ಯವು ನಿಮಗೆ ಎಷ್ಟೇ ಮೆಚ್ಚುಗೆಯಾಗಿದ್ದರೂ (ಇವರ ಸ್ಥಾನದಲ್ಲಿ) ತರುವ ಅನುಮತಿ ಇಲ್ಲ.[17] ಆದರೆ ದಾಸಿಯರನ್ನು ತರಲು ಅನು ಮತಿ ಇದೆ.[18] ಅಲ್ಲಾಹ್ ಸಕಲ ವಸ್ತುಗಳ ಮೇಲ್ವಿಚಾರಕ ನಾಗಿರುತ್ತಾನೆ.

لَا يَحِلُّ لَكَ النِّسَآءُ مِنْ بَعْدُ وَلَآ أَنْ
تَبَدَّلَ بِهِنَّ مِنْ أَزْوَاجٍ وَّلَوْ أَعْجَبَكَ
حُسْنُهُنَّ إِلَّا مَا مَلَكَتْ يَمِينُكَ ۗ وَكَانَ
اللّٰهُ عَلٰى كُلِّ شَيْءٍ رَّقِيبًا ﴿٥٢﴾

53. ಸತ್ಯವಿಶ್ವಾಸಿಗಳೇ, ಪ್ರವಾದಿಯ ಮನೆಗಳೊಳಗೆ ಅನುಮತಿಯಿಲ್ಲದೆ ಪ್ರವೇಶಿಸಬೇಡಿರಿ. ಊಟದ ಸಮಯವನ್ನು ಕಾದುಕೊಂಡಿರಲೂ

يٰٓأَيُّهَا الَّذِينَ آمَنُوا لَا تَدْخُلُوا بُيُوتَ
النَّبِيِّ إِلَّآ أَنْ يُّؤْذَنَ لَكُمْ إِلٰى طَعَامٍ

17. ಈ ಬೋಧನೆಗೆ ಎರಡು ಅರ್ಥಗಳಿವೆ: ಮೊದಲನೆಯದಾಗಿ ಪೂರ್ವೋಕ್ತ 50ನೆಯ ಸೂಕ್ತದಲ್ಲಿ ಪ್ರವಾದಿವರ್ಯರಿಗೆ(ಸ) ಧರ್ಮಸಮ್ಮತಗೊಳಿ ಸಲಾಗಿರುವ ಸ್ತ್ರೀಯರಲ್ಲದೆ ಇತರ ಸ್ತ್ರೀಯರು ಅವರಿಗೆ ಧರ್ಮಸಮ್ಮತವಲ್ಲ. ಎರಡನೆಯದಾಗಿ ಆರ್ಥಿಕ ಮುಗ್ಗಟ್ಟಿನಲ್ಲಿ ನಿಮ್ಮ ಜತೆ ಸಹಕರಿಸಲು, ಪರಲೋಕಕ್ಕೆ, ಇಹಲೋಕಕ್ಕಿಂತ ಪ್ರಾಮುಖ್ಯ ಕಲ್ಪಿಸಲು ಮತ್ತು ಅವರ ಜತೆ ನೀವು ತೋರುವ ಎಲ್ಲಾ ಬಗೆಯ ಧೋರಣೆಯ ಬಗ್ಗೆ ಸಂತೃಪ್ತರಾಗಿರಲು ನಿಮ್ಮ ಪಾವನ ಪತ್ನಿಯರು ಸನ್ನದ್ಧರಾದರೆ, ಅವರ ಪೈಕಿ ಯಾರಿಗಾದರೂ ತಲಾಕ್ ನೀಡಿ ಅವರ ಸ್ಥಾನದಲ್ಲಿ ಬೇರೆ ಪತ್ನಿಯನ್ನು ತರುವುದು ನಿಮ್ಮ ಪಾಲಿಗೆ ಧರ್ಮಸಮ್ಮತವಲ್ಲ.

18. ನಿಕಾಹ್ ಆದ ಪತ್ನಿಯರಲ್ಲದೆ ಅಧೀನಕ್ಕೆ ಬಂದ ಸ್ತ್ರೀಯರೊಂದಿಗೂ ಸಂಸರ್ಗದ ಅನುಮತಿ ಇದೆ ಮತ್ತು ಅವರಿಗೆ ಸಂಖ್ಯಾಮಿತಿ ಇಲ್ಲವೆಂದು ಈ ಸೂಕ್ತ ಸ್ಪಷ್ಟಪಡಿಸುತ್ತದೆ. ಅನ್ನಿಸಾ ಅಧ್ಯಾಯದ - 30, ಅಲ್ ಮೂಮಿನೂನ್ - 6 ಮತ್ತು ಮಆರಿಜ್‌ನ - 30ರಲ್ಲಿಯೂ ಇದೇ ವಿಷಯದ ಸ್ಪಷ್ಟೀಕರಣವಿದೆ.

غَيْرَ نٰظِرِيْنَ اِنٰىهُ ۙ وَلٰكِنْ اِذَا دُعِيْتُمْ
فَادْخُلُوْا فَاِذَا طَعِمْتُمْ فَانْتَشِرُوْا وَلَا
مُسْتَاْنِسِيْنَ لِحَدِيْثٍ ؕ اِنَّ ذٰلِكُمْ كَانَ
يُؤْذِى النَّبِىَّ فَيَسْتَحْىٖ مِنْكُمْ ؗ وَاللّٰهُ
لَا يَسْتَحْىٖ مِنَ الْحَقِّ ؕ وَاِذَا سَاَلْتُمُوْهُنَّ
مَتَاعًا فَسْـَٔلُوْهُنَّ مِنْ وَّرَآءِ حِجَابٍ ؕ
ذٰلِكُمْ اَطْهَرُ لِقُلُوْبِكُمْ وَقُلُوْبِهِنَّ ؕ وَمَا
كَانَ لَكُمْ اَنْ تُؤْذُوْا رَسُوْلَ اللّٰهِ وَلَاۤ
اَنْ تَنْكِحُوْۤا اَزْوَاجَهٗ مِنْۢ بَعْدِهٖۤ اَبَدًا ؕ
اِنَّ ذٰلِكُمْ كَانَ عِنْدَ اللّٰهِ عَظِيْمًا ﴿۵۳﴾

ಬೇಡಿರಿ. ನಿಮ್ಮನ್ನು ಊಟಕ್ಕೆ ಕರೆದರೆ ಖಂಡಿತ ಹೋಗಿರಿ. ಆದರೆ ಊಟ ಮಾಡಿಯಾದೊಡನೆ ಚದುರಿ ಬಿಡಿರಿ, ಮಾತಾಡುತ್ತ ಕುಳಿತಿರಬೇಡಿರಿ. ನಿಮ್ಮ ಈ ವರ್ತನೆಗಳು ಪ್ರವಾದಿಗೆ ತೊಂದರೆ ಕೊಡುತ್ತಿವೆ. ಆದರೆ ಅವರು ಸಂಕೋಚದಿಂದ ಏನೂ ಹೇಳುವುದಿಲ್ಲ ಮತ್ತು ಅಲ್ಲಾಹನು ಸತ್ಯಸಂಗತಿಯನ್ನು ಹೇಳಲು ನಾಚುವುದಿಲ್ಲ. ಪ್ರವಾದಿಯವರ ಪತ್ನಿಯರಿಂದ ನಿಮಗೇನಾದರೂ ವಸ್ತುವನ್ನು ಕೇಳಬೇಕಾಗಿದ್ದರೆ ತೆರೆಯ ಹಿಂದಿನಿಂದ ಕೇಳಿ ಪಡಕೊಳ್ಳಿರಿ. ಇದು ನಿಮ್ಮ ಹಾಗೂ ಅವರ ಹೃದಯಗಳ ಶುದ್ಧಿಗೆ ಹೆಚ್ಚು ಸೂಕ್ತವಾದ ಕ್ರಮವಾಗಿದೆ. ಅಲ್ಲಾಹನ ಸಂದೇಶವಾಹಕರಿಗೆ ಕೀಟಲೆ ಕೊಡುವುದು ನಿಮಗೆ ಎಷ್ಟು ಮಾತ್ರಕ್ಕೂ ಸೂಕ್ತವಲ್ಲ. ಅವರ ಕಾಲಾನಂತರ ಅವರ ಪತ್ನಿಯರೊಂದಿಗೆ ವಿವಾಹ ಮಾಡಿಕೊಳ್ಳುವುದೂ ಎಂದೆಂದಿಗೂ ನಿಮಗೆ ಧರ್ಮಸಮ್ಮತವಾದುದಲ್ಲ. ಇದು ಅಲ್ಲಾಹನ ಬಳಿ ಮಹಾ ಪಾಪಕಾರ್ಯ.

اِنْ تُبْدُوْا شَيْـًٔا اَوْ تُخْفُوْهُ فَاِنَّ اللّٰهَ
كَانَ بِكُلِّ شَىْءٍ عَلِيْمًا ﴿۵۴﴾

54. ನೀವು ಯಾವುದನ್ನಾದರೂ ಪ್ರಕಟಗೊಳಿಸಿದರೂ ಬಚ್ಚಿಟ್ಟರೂ ಅಲ್ಲಾಹನು ಪ್ರತಿಯೊಂದು ವಿಷಯದ ಬಗ್ಗೆ ಸಂಪೂರ್ಣ ಜ್ಞಾನವಿರುವವನಾಗಿರುತ್ತಾನೆ.

لَا جُنَاحَ عَلَيْهِنَّ فِىْۤ اٰبَآئِهِنَّ وَلَاۤ اَبْنَآئِهِنَّ
وَلَاۤ اِخْوَانِهِنَّ وَلَاۤ اَبْنَآءِ اِخْوَانِهِنَّ وَلَاۤ
اَبْنَآءِ اَخَوٰتِهِنَّ وَلَا نِسَآئِهِنَّ وَلَا
مَا مَلَكَتْ اَيْمَانُهُنَّ ۚ وَاتَّقِيْنَ اللّٰهَ ؕ
اِنَّ اللّٰهَ كَانَ عَلٰى كُلِّ شَىْءٍ شَهِيْدًا ﴿۵۵﴾

55. ಪ್ರವಾದಿಯವರ ಪತ್ನಿಯರ ಮನೆಗಳಿಗೆ ಅವರ ತಂದೆಯಂದಿರಾಗಲಿ, ಪುತ್ರರಾಗಲಿ, ಸಹೋದರರಾಗಲಿ, ಸೋದರ ಪುತ್ರರಾಗಲಿ, ಸೋದರಿ ಪುತ್ರರಾಗಲಿ, ಅವರ ಒಡನಾಟದ ಸ್ತ್ರೀಯರಾಗಲಿ, ಅವರ ಗುಲಾಮರಾಗಲಿ, ಬರುವುದರಲ್ಲಿ ದೋಷವಿಲ್ಲ. (ಸ್ತ್ರೀಯರೇ) ನೀವು ಅಲ್ಲಾಹನ ಆಜ್ಞೋಲ್ಲಂಘನೆಯಿಂದ ದೂರವಿರಬೇಕು. ಅಲ್ಲಾಹನು ಸಕಲ ವಸ್ತುಗಳ ಬಗ್ಗೆ ಸಾಕ್ಷಿಯಾಗಿದ್ದಾನೆ.

اِنَّ اللّٰهَ وَمَلٰٓئِكَتَهٗ يُصَلُّوْنَ عَلَى النَّبِىِّ ؕ
يٰۤاَيُّهَا الَّذِيْنَ اٰمَنُوْا صَلُّوْا عَلَيْهِ
وَسَلِّمُوْا تَسْلِيْمًا ﴿۵۶﴾

56. ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಯವರಿಗೆ 'ಸಲಾತ್' (ಸ್ವಸ್ತಿ ವಚನ) ಹೇಳುತ್ತಾರೆ. ಸತ್ಯವಿಶ್ವಾಸಿಗಳೇ, ನೀವೂ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿವಂದನೆ) ಸಲ್ಲಿಸುತ್ತಲಿರಿ.[19]

19. ಅಲ್ಲಾಹನು ಪ್ರವಾದಿವರ್ಯರ(ಸ) ಮೇಲೆ ಸ್ವಸ್ತಿವಚನ ಕಳುಹಿಸುವುದೆಂದರೆ ಅವನು ಅವರ ಪಾಲಿಗೆ ಅತ್ಯಂತ ಕರುಣಾಮಯಿಯಾಗಿದ್ದಾನೆಂದರ್ಥ. ಅವನು ಅವರನ್ನು ಶ್ಲಾಘಿಸುತ್ತಾನೆ, ಅವರ ಕೆಲಸಗಳಲ್ಲಿ ಸಮೃದ್ಧಿ ದಯಪಾಲಿಸುತ್ತಾನೆ, ಅವರ ಹೆಸರನ್ನು ಉನ್ನತಗೊಳಿಸುತ್ತಾನೆ ಮತ್ತು ಅವರ ಮೇಲೆ ಅನುಗ್ರಹದ ಮಳೆಗರೆಸುತ್ತಾನೆ. ದೇವಚರರು ಅವರ ಮೇಲೆ ಸ್ವಸ್ತಿವಚನ ಕಳುಹಿಸುವುದೆಂದರೆ ಅವರು ಪ್ರವಾದಿಯವರ(ಸ) ಬಗ್ಗೆ ಅತೀವ ಪ್ರೀತಿಯನ್ನು ಹೊಂದಿದ್ದಾರೆ. ಅವರ ಕುರಿತು ಅಲ್ಲಾಹನೊಡನೆ ಮೊರೆಯಿಡುತ್ತಾರೆ ಮತ್ತು ಅವರಿಗೆ ಉನ್ನತ ಪದವಿ ದಯಪಾಲಿಸುವಂತೆ

57. ಅಲ್ಲಾಹ್ ಮತ್ತು ಅವನ ಸಂದೇಶವಾಹಕರಿಗೆ ಕೀಟಲೆ ಕೊಡುವವರನ್ನು ಅಲ್ಲಾಹ್ ಈ ಲೋಕದಲ್ಲೂ ಪರಲೋಕದಲ್ಲೂ ಶಪಿಸಿರುತ್ತಾನೆ ಮತ್ತು ಅವರಿಗಾಗಿ ಅಪಮಾನಕಾರಕ ಯಾತನೆಯನ್ನು ಸಿದ್ಧಗೊಳಿಸಿಟ್ಟಿರುತ್ತಾನೆ.

إِنَّ الَّذِينَ يُؤْذُونَ اللَّهَ وَرَسُولَهُ
لَعَنَهُمُ اللَّهُ فِي الدُّنْيَا وَالْآخِرَةِ وَأَعَدَّ
لَهُمْ عَذَابًا مُّهِينًا ﴿٥٧﴾

58. ಸತ್ಯವಿಶ್ವಾಸಿಗಳಿಗೂ ಸತ್ಯವಿಶ್ವಾಸಿನಿಯರಿಗೂ ವಿನಾಕಾರಣ ಕೀಟಲೆ ಕೊಡುವವರು ಒಂದು ಅತಿ ದೊಡ್ಡ ಸುಳ್ಳಾರೋಪ ಹಾಗೂ ಸುವ್ಯಕ್ತ ಪಾಪದ ಹೊರೆಯನ್ನು ಹೊತ್ತುಕೊಂಡರು.

وَالَّذِينَ يُؤْذُونَ الْمُؤْمِنِينَ وَالْمُؤْمِنَاتِ
بِغَيْرِ مَا اكْتَسَبُوا فَقَدِ احْتَمَلُوا
بُهْتَانًا وَإِثْمًا مُّبِينًا ﴿٥٨﴾

59. ಪೈಗಂಬರರೇ, ತಮ್ಮ ಪತ್ನಿಯರೊಡನೆಯೂ ಪುತ್ರಿಯರೊಡನೆಯೂ ಸತ್ಯವಿಶ್ವಾಸಿನಿಯರೊಡನೆಯೂ ತಮ್ಮ ಮೇಲೆ ತಮ್ಮ ಚಾದರಗಳ ಸೆರಗನ್ನು ಇಳಿಸಿಕೊಳ್ಳಬೇಕೆಂದು ಹೇಳಿಬಿಡಿರಿ.[20] ಅವರು ಗುರುತಿಸಲ್ಪಡುವಂತಾಗಲಿಕ್ಕೂ ಸತಾಯಿಸಲ್ಪಡದಿರಲಿಕ್ಕೂ ಇದು ಹೆಚ್ಚು ಸೂಕ್ತವಾದ ವಿಧಾನ.[21] ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

يَا أَيُّهَا النَّبِيُّ قُل لِّأَزْوَاجِكَ وَبَنَاتِكَ
وَنِسَاءِ الْمُؤْمِنِينَ يُدْنِينَ عَلَيْهِنَّ
مِن جَلَابِيبِهِنَّ ۚ ذَٰلِكَ أَدْنَىٰ أَن
يُعْرَفْنَ فَلَا يُؤْذَيْنَ ۗ وَكَانَ اللَّهُ
غَفُورًا رَّحِيمًا ﴿٥٩﴾

60. ಕಪಟವಿಶ್ವಾಸಿಗಳೂ ಹೃದಯದಲ್ಲಿ ಕೆಡುಕುಳ್ಳವರೂ ಮದೀನಾದಲ್ಲಿ ಉದ್ರೇಕಕಾರಿ ವದಂತಿಗಳನ್ನು ಹಬ್ಬಿಸುವವರೂ ತಮ್ಮ ದುಷ್ಕೃತ್ಯಗಳನ್ನು ಬಿಡದಿದ್ದರೆ ನಾವು ಅವರ ವಿರುದ್ಧ ಕಾರ್ಯಾಚರಣೆಗಾಗಿ ನಿಮ್ಮನ್ನು ಎಬ್ಬಿಸಿ ನಿಲ್ಲಿಸುವೆವು. ಅನಂತರ ಅವರು ಈ ನಗರದಲ್ಲಿ ನಿಮ್ಮ ಜೊತೆ ಇರುವುದು ಕಷ್ಟ ಸಾಧ್ಯ.

لَّئِن لَّمْ يَنتَهِ الْمُنَافِقُونَ وَالَّذِينَ
فِي قُلُوبِهِم مَّرَضٌ وَالْمُرْجِفُونَ فِي
الْمَدِينَةِ لَنُغْرِيَنَّكَ بِهِمْ ثُمَّ لَا
يُجَاوِرُونَكَ فِيهَا إِلَّا قَلِيلًا ﴿٦٠﴾

61. ಅವರ ಮೇಲೆ ಎಲ್ಲ ಕಡೆಗಳಿಂದಲೂ ಛೀಮಾರಿ ಬೀಳುತ್ತಿರುವುದು. ಅವರು ಕಂಡಕಂಡಲ್ಲಿ ಸೆರೆ ಹಿಡಿಯಲ್ಪಡುವರು ಮತ್ತು ನಿರ್ದಾಕ್ಷಿಣ್ಯವಾಗಿ ಕೊಲ್ಲಲ್ಪಡುವರು.

مَّلْعُونِينَ ۖ أَيْنَمَا ثُقِفُوا أُخِذُوا وَقُتِّلُوا
تَقْتِيلًا ﴿٦١﴾

62. ಇದು ಇಂತಹವರ ವಿಷಯದಲ್ಲಿ ಹಿಂದಿನಿಂದಲೂ ನಡೆದು ಬಂದಿರುವ ಅಲ್ಲಾಹನ ನಿಯಮವಾಗಿದೆ ಮತ್ತು ನೀವು ಅಲ್ಲಾಹನ ನಿಯಮದಲ್ಲಿ ಯಾವ ಬದಲಾವಣೆಯನ್ನೂ ಕಾಣಲಾರಿರಿ.

سُنَّةَ اللَّهِ فِي الَّذِينَ خَلَوْا مِن قَبْلُ ۖ
وَلَن تَجِدَ لِسُنَّةِ اللَّهِ تَبْدِيلًا ﴿٦٢﴾

ಕೋರುತ್ತಾರೆ. ಸತ್ಯವಿಶ್ವಾಸಿಗಳು ಅವರ ಕುರಿತು ಸ್ವಸ್ತಿವಚನ ಹೇಳುವುದೆಂದರೆ, ಅವರ ಮೇಲೆ ಅನುಗ್ರಹಗಳನ್ನು ವರ್ಷಿಸುವಂತೆ ಅಲ್ಲಾಹನೊಡನೆ ಪ್ರಾರ್ಥಿಸುವುದಾಗಿದೆ.

20. ಅರ್ಥಾತ್- ಚಾದರ ಹೊದ್ದು ಮೇಲಿನಿಂದ ಸೆರಗನ್ನು ಎಳೆದುಕೊಳ್ಳಿರಿ. ಬೇರೆ ಪದಗಳಲ್ಲಿ ಹೇಳುವುದಾದರೆ ಮುಖ ತೆರೆದು ನಡೆಯಬೇಡಿರಿ.

21. 'ಗುರುತಿಸುವಂತಾಗಲು' ಎಂದರೆ ಅವರನ್ನು ಸರಳವಾದ ಮತ್ತು ಮಾನಾರ್ಹವಾದ ಉಡುಪಿನಲ್ಲಿರುವುದನ್ನು ಕಾಣುವ ಪ್ರತಿಯೊಬ್ಬನೂ ಇವರು ಸಭ್ಯ ಮತ್ತು ಕುಲೀನ ಸ್ತ್ರೀಯರು, ಸ್ವಚ್ಛಂದ ಮತ್ತು ದುಶ್ಶೀಲೆಯರಾದ ಸ್ತ್ರೀಯರಲ್ಲ ಎಂದು ಮನಗಾಣಬೇಕು. ಚಾರಿತ್ರ್ಯಹೀನರಾದ ವ್ಯಕ್ತಿಗಳು ಅವರಿಂದ ತಮ್ಮ ಮನಸೇಚ್ಛೆಯನ್ನು ಈಡೇರಿಸುವ ನಿರೀಕ್ಷೆಯನ್ನಿಟ್ಟುಕೊಳ್ಳುವಂತಾಗಬಾರದು. 'ಸತಾಯಿಸಲ್ಪಡಬಾರದು' ಎಂದರೆ ಅವರನ್ನು ಯಾರೂ ಕಾಡಿಸಲು ಮತ್ತು ಪೀಡಿಸಲು ಹೋಗುವಂತಾಗಬಾರದು.

63. ಪ್ರಳಯಕಾಲದ ಘಳಿಗೆ ಯಾವಾಗ ಬರುವುದೆಂದು ಜನರು ನಿಮ್ಮೊಡನೆ ಕೇಳುತ್ತಾರೆ. ಅದರ ಜ್ಞಾನವಿರುವುದು ಅಲ್ಲಾಹನಿಗೆ ಮಾತ್ರ ಎಂದು ಹೇಳಿರಿ. ಅದು ಬಹಳ ಸಮೀಪದಲ್ಲೇ ಇರಬಹುದು ನಿಮಗೇನು ಗೊತ್ತು.

يَسْـَٔلُكَ النَّاسُ عَنِ السَّاعَةِ ؕ قُلْ اِنَّمَا عِلْمُهَا عِنْدَ اللّٰهِ ؕ وَمَا يُدْرِيْكَ لَعَلَّ السَّاعَةَ تَكُوْنُ قَرِيْبًا ﴿٦٣﴾

64. ಹೇಗಿದ್ದರೂ ಅಲ್ಲಾಹನು ಸತ್ಯನಿಷೇಧಕರನ್ನು ಶಪಿಸಿದ್ದಾನೆ ಮತ್ತು ಅವರಿಗಾಗಿ ಧಗಧಗಿಸುವ ನರಕಾಗ್ನಿಯನ್ನು ಸಿದ್ಧಪಡಿಸಿಟ್ಟಿರುತ್ತಾನೆಂಬುದು ಖಚಿತ.

اِنَّ اللّٰهَ لَعَنَ الْكٰفِرِيْنَ وَاَعَدَّ لَهُمْ سَعِيْرًا ﴿٦٤﴾

65. ಅವರು ಅದರಲ್ಲಿ ಶಾಶ್ವತವಾಗಿ ಉಳಿಯುವರು. ಅವರು ಯಾವ ಮಿತ್ರನನ್ನೂ ಸಹಕಾರಿಯನ್ನೂ ಪಡೆಯಲಾರರು.

خٰلِدِيْنَ فِيْهَاۤ اَبَدًا ۚ لَا يَجِدُوْنَ وَلِيًّا وَّلَا نَصِيْرًا ﴿٦٥﴾

66. ಅವರ ಮುಖಗಳು ನರಕಾಗ್ನಿಯಲ್ಲಿ ಹೊರಳಾಡಿಸಲ್ಪಡುವ ದಿನ ಅವರು, "ಅಯ್ಯೋ! ನಾವು ಅಲ್ಲಾಹ್ ಮತ್ತು ಪೈಗಂಬರರ ಅನುಸರಣೆ ಮಾಡುತ್ತಿದ್ದರೆ!" ಎನ್ನುವರು.

يَوْمَ تُقَلَّبُ وُجُوْهُهُمْ فِى النَّارِ يَقُوْلُوْنَ يٰلَيْتَنَاۤ اَطَعْنَا اللّٰهَ وَاَطَعْنَا الرَّسُوْلَا ﴿٦٦﴾

67. ಮತ್ತೂ ಮುಂದುವರಿದು, "ನಮ್ಮ ಪ್ರಭೂ ನಾವು ನಮ್ಮ ಸರದಾರರನ್ನು ಹಾಗೂ ಹಿರಿಯರನ್ನು ಅನುಸರಿಸಿದೆವು. ಅವರು ನಮ್ಮನ್ನು ದಾರಿಗೆಡಿಸಿ ಬಿಟ್ಟರು.

وَقَالُوْا رَبَّنَاۤ اِنَّاۤ اَطَعْنَا سَادَتَنَا وَكُبَرَآءَنَا فَاَضَلُّوْنَا السَّبِيْلَا ﴿٦٧﴾

68. ನಮ್ಮ ಪ್ರಭೂ! ಅವರಿಗೆ ಇಮ್ಮಡಿ ಯಾತನೆ ಕೊಡು ಮತ್ತು ಅವರನ್ನು ಅತ್ಯುಗ್ರವಾಗಿ ಶಪಿಸು" ಎಂದೂ ಹೇಳುವರು.

رَبَّنَاۤ اٰتِهِمْ ضِعْفَيْنِ مِنَ الْعَذَابِ وَالْعَنْهُمْ لَعْنًا كَبِيْرًا ﴿٦٨﴾ ع

69. ಸತ್ಯವಿಶ್ವಾಸಿಗಳೇ, ನೀವು ಮೂಸಾರಿಗೆ ಕೀಟಲೆ ಕೊಟ್ಟವರಂತೆ ಆಗಬೇಡಿರಿ. ತರುವಾಯ ಅಲ್ಲಾಹನು ಆ ಜನರು ಸೃಷ್ಟಿಸಿದ ಮಾತುಗಳಿಂದ ಅವರನ್ನು (ಮೂಸಾರನ್ನು) ಮುಕ್ತಗೊಳಿಸಿದನು. ಅವರು ಅಲ್ಲಾಹನ ಬಳಿ ಗೌರವಾನ್ವಿತರಾಗಿದ್ದರು.

يٰۤاَيُّهَا الَّذِيْنَ اٰمَنُوْا لَا تَكُوْنُوْا كَالَّذِيْنَ اٰذَوْا مُوْسٰى فَبَرَّاَهُ اللّٰهُ مِمَّا قَالُوْا ؕ وَكَانَ عِنْدَ اللّٰهِ وَجِيْهًا ﴿٦٩﴾

70. ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಸರಿಯಾದ ಮಾತನ್ನೇ ಹೇಳಿರಿ-

يٰۤاَيُّهَا الَّذِيْنَ اٰمَنُوا اتَّقُوا اللّٰهَ وَقُوْلُوْا قَوْلًا سَدِيْدًا ﴿٧٠﴾

71. ಅಲ್ಲಾಹ್ ನಿಮ್ಮ ಕರ್ಮಗಳನ್ನು ಸರಿಪಡಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು. ಯಾರು ಅಲ್ಲಾಹ್ ಮತ್ತು

يُّصْلِحْ لَكُمْ اَعْمَالَكُمْ وَيَغْفِرْ لَكُمْ ذُنُوْبَكُمْ ؕ وَمَنْ يُّطِعِ اللّٰهَ وَرَسُوْلَهٗ

فَقَدْ فَازَ فَوْزًا عَظِيْمًا ۝٧١

ಅವನ ಸಂದೇಶವಾಹಕರ ಅನುಸರಣೆ ಮಾಡಿದನೋ ಅವನು ಮಹಾ ಯಶಸ್ಸನ್ನು ಪಡೆದನು.

اِنَّا عَرَضْنَا الْاَمَانَةَ عَلَى السَّمٰوٰتِ
وَالْاَرْضِ وَالْجِبَالِ فَاَبَيْنَ اَنْ
يَّحْمِلْنَهَا وَاَشْفَقْنَ مِنْهَا وَحَمَلَهَا
الْاِنْسَانُ ؕ اِنَّهٗ كَانَ ظَلُوْمًا جَهُوْلًا ۝٧٢

72. ನಾವು ಈ ಅಮಾನತ್ತನ್ನು[22] ಆಕಾಶಗಳ, ಭೂಮಿಯ ಮತ್ತು ಪರ್ವತಗಳ ಮುಂದಿರಿಸಿದೆವು. ಆಗ ಅವು ಅದನ್ನು ಎತ್ತಿಕೊಳ್ಳಲು ಸಿದ್ಧವಾಗಲಿಲ್ಲ ಮತ್ತು ಅದರಿಂದ ಭೀತರಾದವು. ಆದರೆ, ಮಾನವನು ಅದನ್ನು ಎತ್ತಿಕೊಂಡನು. ನಿಶ್ಚಯವಾಗಿಯೂ ಅವನು ದೊಡ್ಡ ಅಕ್ರಮಿಯೂ ತಿಳಿಗೇಡಿಯೂ ಆಗಿರುತ್ತಾನೆ.[23]

لِّيُعَذِّبَ اللّٰهُ الْمُنٰفِقِيْنَ وَالْمُنٰفِقٰتِ
وَالْمُشْرِكِيْنَ وَالْمُشْرِكٰتِ وَيَتُوْبَ
اللّٰهُ عَلَى الْمُؤْمِنِيْنَ وَالْمُؤْمِنٰتِ ؕ
وَكَانَ اللّٰهُ غَفُوْرًا رَّحِيْمًا ۝٧٣ ع

73. (ಈ ಅಮಾನತ್ತಿನ ಹೊರೆಯನ್ನು ಹೊತ್ತುದರ ಪರಿಣಾಮ ವೇನೆಂದರೆ) ಇದು, ಅಲ್ಲಾಹನು ಕಪಟವಿಶ್ವಾಸಿಗಳಿಗೂ ಕಪಟ ವಿಶ್ವಾಸಿನಿಯರಿಗೂ ಬಹುದೇವಾರಾಧಕರಾದ ಪುರುಷರಿಗೂ ಸ್ತ್ರೀಯರಿಗೂ ಶಿಕ್ಷೆ ಕೊಡುವಂತಾಗಲು ಮತ್ತು ಸತ್ಯವಿಶ್ವಾಸಿಗಳಾದ ಪುರುಷರು ಮತ್ತು ಸ್ತ್ರೀಯರ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸುವಂತಾಗಲು. ಅಲ್ಲಾಹ್ ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

---

22. 'ಅಮಾನತ್ತು' ಎಂದರೆ ಮಾನವನಿಗೆ ಭೂಮಿಯಲ್ಲಿ ಅಧಿಕಾರವನ್ನೂ ಬುದ್ಧಿಶಕ್ತಿಯನ್ನೂ ಪ್ರದಾನ ಮಾಡುವ ಮೂಲಕ ಅಲ್ಲಾಹನು ವಿಧಿಸಿರುವ ಕರ್ತವ್ಯಗಳ ಹೊರೆ.

23. ಅರ್ಥಾತ್- ಈ 'ಅಮಾನತ್ತು'ಗಳ ವಾಹಕನಾಗಿಯೂ ಅವನು ತನ್ನ ಕರ್ತವ್ಯವನ್ನರಿಯುವುದಿಲ್ಲ. ಕರ್ತವ್ಯಚ್ಯುತಿ ಮಾಡಿ ಅವನು ತನ್ನ ಮೇಲೆಯೇ ಅಕ್ರಮವೆಸಗುತ್ತಾನೆ.